ಐಕ್ಯರಂಗ

ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯಸಮಿತಿಯ ಮುಖಪತ್ರಿಕೆ

ಸಂಪುಟ 3 | ಸಂಚಿಕೆ 3 | ಜನವರಿ 18, 1981 | ಬೆಲೆ : 50 ಪೈಸೆ

ಒಂದು ವರ್ಷ ಆಳಿದ ಗುಂಡೂರಾಯರು

ಶ್ರೀಮಾನ್ ಗುಂಡೂರಾಯರು ಮುಖ್ಯಮಂತ್ರಿಯಾಗಿ ಆಡಳಿತೆ ವಹಿಸಿಕೊಂಡು ಇದೇ ತಾ. 12ಕ್ಕೆ ಒಂದು ವರ್ಷವಾಯಿತು. ಸಾಮಾನ್ಯವಾಗಿ ಯಾರೂ ಒಂದು ವರುಷವಾಯಿತೆಂದು ಸಾರುವುದಾಗಲಿ ಅಥವಾ ಅದಕ್ಕೆ ಮಹತ್ವಕೊಡುವುದಾಗಲಿ ನಮ್ಮ ಪ್ರಜಾಪ್ರಭುತ್ವದಲ್ಲಿ ಅತಿವಿರಳ. ಆದರೆ ಗುಂಡೂರಾಯರಿಗೆ ಇದೊಂದು ಮಹತ್ವದ ದಿನವಾಗಿತ್ತು. ಯಾಕೆಂದರೆ, ರಾಜ್ಯದ ಮುಖ್ಯಮಂತ್ರಿಯಾಗುವೆನೆಂಬ ನಂಬಿಕೆ ಅವರಿಗಿರಲಿಲ್ಲ. ಎರಡನೆಯದಾಗಿ ಮುಖ್ಯಮಂತ್ರಿಯಾಗಿ ಒಂದು ವರ್ಷಕಾಲ ಇರುವೆನೆಂಬುದನ್ನು ಕನಸಿನಲ್ಲೂ ಎಣಿಸಿರಲಿಕ್ಕಿಲ್ಲ. ಆದ್ದರಿಂದಲೇ ಈ ದಿನವನ್ನು ವಿಜೃಂಭಣೆಯಿಂದ ಆಚರಿಸಲಾಯಿತು. ಪಕ್ಷಾಂತರಿಗಳ ಬೆಂಬಲದಿಂದ ಸರಕಾರ ರಚನೆಮಾಡಿ ಒಂದು ವರ್ಷ ದಾಟಿದ್ದು ಸೋಜಿಗವೆಂದೇ ಹೇಳಬೇಕು.

ಹಲವಾರು ಸಮಸ್ಯೆಗಳನ್ನು ಅವರು ಎದುರಿಸಬೇಕಾಗಿಬಂತು. ರಾಜ್ಯದಲ್ಲಿ ಕೂಡಲೇ ಸಾರ್ವತ್ರಿಕ ಚುನಾವಣೆ ನಡೆಯಬೇಕೆಂಬ ಅವರ

ಸಂಪಾದಕೀಯ

ಪಾರ್ಟಿಯವರ ಒತ್ತಾಯಕ್ಕೆ ಮಣಿಯಲಿಲ್ಲ. ಪಕ್ಷಾಂತರಿಗಳಿಗೆ ಮಂತ್ರಿಮಂಡಲದಲ್ಲಿ ಪ್ರಾತಿನಿಧ್ಯ ಕೊಡಬಾರದೆಂಬ ವಾದಕ್ಕೆ ಮಣಿಯದೆ ಮಂತ್ರಿಮಂಡಲದಲ್ಲಿ ಅವರನ್ನು ಸೇರಿಸಿಕೊಂಡರು. ಇದರಿಂದ ಅವರ ಸಂಕಟ ಮುಗಿದಹಾಗಿಲ್ಲ. ಅವರ ಪಾರ್ಟಿಯೊಳಗಿನ ಬಿಕ್ಕಟ್ಟು ಆಳವಾಗುತ್ತಿದೆ. ಉಪಮುಖ್ಯಮಂತ್ರಿ ಸ್ಥಾನದಲ್ಲಿದ್ದ ಶ್ರೀ ಬಂಗಾರಪ್ಪನವರ ರಾಜಿನಾಮೆ, ಒಳಜಗಳ, ಗುಂಪುಗಾರಿಕೆಗಳು ತಾಂಡವವಾಡುತ್ತಿವೆ. ಅತೃಪ್ತ ಕಾಂಗ್ರೆಸ್ಸಿನವರಿಂದ ಸವಾಲು ಯಾವಾಗ ಬರುವುದೆಂದು ಹೇಳಲು ಸಾಧ್ಯವಿಲ್ಲ. ಒಂದು ದಿನ ಅದು ಸ್ಫೋಟವಾಗಬಹುದು. ಆದ್ದರಿಂದಲೇ ಒಂದು ವರ್ಷ ಒಂದು ಯುಗವೆಂದು ಅವರು ತಿಳಿದಿರಬಹುದು.

ಕನ್ನಡ ಜನ ಮಾತ್ರ 1980 ನ್ನೆಂದೂ ಮರೆಯಲಾರರು. ಇದೊಂದು ಚಾರಿತ್ರಿಕ ವರ್ಷ. ಬೆಲೆಏರಿಕೆ, ನಿರುದ್ಯೋಗ ಸಮಸ್ಯೆಗಳು ಇನ್ನೂ ತೀವ್ರಗೊಂಡಿವೆ. ಕೈಗಾರಿಕಾ ಕ್ಷೇತ್ರದಲ್ಲಿ ಬಿಕ್ಕಟ್ಟು. ಗ್ರಾಮಾಂತರ ಪ್ರದೇಶದಲ್ಲಿ ಕೆಲವು ಕಡೆ ಅತಿವೃಷ್ಟಿ, ಮತ್ತಿತರ ಕಡೆ ಅನಾವೃಷ್ಟಿ, ಕಾರ್ಮಿಕರ ದೀರ್ಘ ಹೋರಾಟ, ರೈತರ ಚಳುವಳಿ, ದಲಿತರ ಮೇಲೆ ಅಮಾನುಷ ದಬ್ಬಾಳಿಕೆ ಇವು ಜನತೆಯನ್ನೆದುರಿಸಿವೆ. ಮ ಲ ಪ್ರ ಭಾ

(ಕಡೇ ಪುಟ ನೋಡಿ)

ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಹೋರಾಟವನ್ನು ಬೆಂಬಲಿಸಿ

ಜ. ೨೧ರಂದು ಬೆಂಗಳೂರುಬಂದ್ ಸೌಹಾರ್ದ ಸಮಿತಿಯ ಕರೆ

ದಿನಾಂಕ 11-1-81 ರಂದು ಬೆಳಿಗ್ಗೆ ಹತ್ತು ಘಂಟೆಗೆ ಬೆಂಗಳೂರಿನ ಹೋಟೆಲ್ ಪರಾಗ್‌ನಲ್ಲಿ ಕೇಂದ್ರ ಕಾರ್ಮಿಕ ಸಂಘಟನೆಗಳಿಗೆ ಸೇರಿದ ಹಾಗೂ ಸ್ವತಂತ್ರ ಸಂಘಗಳ ಪ್ರತಿನಿಧಿಗಳ ಸಮಾವೇಶ ಜರುಗಿತು. ಈ ಸಮಾವೇಶದಲ್ಲಿ ಸುಮಾರು 400ಕ್ಕೂ ಮಿಕ್ಕಿ ಪ್ರತಿನಿಧಿಗಳು ಭಾಗವಹಿಸಿ ಸಾರ್ವಜನಿಕ ವಲಯದ ಕಾರ್ಮಿಕರ ಮುಷ್ಕರವನ್ನು ಬೆಂಬಲಿಸಿದರು. ಈ ಸಮಾವೇಶದ ಅಧ್ಯಕ್ಷತೆಯನ್ನು ಕೇಂದ್ರ ಸಂಘಟನೆಯಮುಖಂಡರುಗಳು ವಹಿಸಿದರು. ಸಿ.ಐ.ಟಿ.ಯು. ಪರವಾಗಿ ಕಾಂ. ಸಿ. ನಂಜುಂಡಪ್ಪನವರು ಪ್ರತಿನಿಧಿಸಿದ್ದರು.

ಸಮಾವೇಶದಲ್ಲಿ ಈ ಕೆಳಕಂಡ ಗೊತ್ತುವಳಿಗಳನ್ನು ಸಿ.ಐ.ಟಿ.ಯು.ವಿನ ರಾಜ್ಯ ಅಧ್ಯಕ್ಷರೂ, ಸೌಹಾರ್ದ ಸಮಿತಿಯ ಸಂಚಾಲಕರಲ್ಲಿ ಒಬ್ಬರಾದ ಕಾಂ. ಸೂರ್ಯನಾರಾಯಣ ರಾವ್ ಮಂಡಿಸಿದರು.

1) ಕಳೆದ 20ದಿನಗಳಿಂದ ಹೋರಾಟದಲ್ಲಿರುವ ಸಾರ್ವಜನಿಕ ಉದ್ದಿಮೆಗಳ ಕಾರ್ಮಿಕರ ಮುಷ್ಕರವನ್ನು ಬಲಯುತಪಡಿಸಲು ದಿನಾಂಕ 21-1-81ರಂದು 'ಬೆಂಗಳೂರುಬಂದ್' ಕಾರ್ಯಕ್ರಮ ಯಶಸ್ವಿ ಮಾಡುವದು.

2) ಬಿ. ಎಚ್. ಇ. ಎಲ್. ಒಪ್ಪಂದದ ಬಗ್ಗೆ ಕೇಂದ್ರ ಮಂತ್ರಿ ಸ್ಟೀಫನ್ ಮಾಡಿದ ಹೇಳಿಕೆಯನ್ನು ಉಗ್ರವಾಗಿ ಖಂಡಿಸಲಾಯಿತು.

3) ತಮ್ಮ ಬೇಡಿಕೆಗಳಿಗೆ ಒತ್ತಾಯಿಸಿ ವಿಧಾನಸೌಧಕ್ಕೆ ಕಾಲ್ನಡಿಗೆಯಲ್ಲಿ ಬರುತ್ತಿರುವ ರೈತಬಾಂಧವರನ್ನು ಮತ್ತು ಫೆ. 5 ರಂದು ನಡೆಯಲಿರುವ ಕಾರ್ಯಕ್ರಮಕ್ಕೆ ಬೆಂಬಲ ಸೂಚಿಸುವದು.

4) ಡಿ. 12 ರಂದು ನಡೆದ ರೈತ ಜಾಥಾದಲ್ಲಿ ಭಾಗವಹಿಸಿದ್ದಕ್ಕಾಗಿ ಮೈಕೋ ಆಡಳಿತ ವರ್ಗದವರು 4000 ಕಾರ್ಮಿಕರಿಗೆ ಎಂಟು ದಿನದ ವೇತನವನ್ನು ಕಡಿತ ಮಾಡಿ

(ಕಡೇ ಪುಟ ನೋಡಿ)

ಜಾಥಾ ಯಶಸ್ವಿಗೊಳಿಸಲು ಸಿ.ಪಿ.ಐ.(ಎಂ) ರಾಜ್ಯಸಮಿತಿ ಕರೆ

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ಭಾರತ ಕಮ್ಯುನಿಸ್ಟ್ ಪಕ್ಷ, ಕಾಂಗ್ರೆಸ್(ಯು) ಮತ್ತು ಲೋಕದಳದ ಪ್ರತಿನಿಧಿಗಳು ಜನವರಿ 2 ಮತ್ತು 3ರಂದು ಸೇರಿ ಕರ್ನಾಟಕ ರಾಜ್ಯದಲ್ಲಿ ಒಂದು ಬದಲಿ ರಾಜಕೀಯ ಶಕ್ತಿಯನ್ನು ಬೆಳೆಸಲು ಮುಂದಾಗಿರುವುದನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಕರ್ನಾಟಕ ರಾಜ್ಯ ಸಮಿತಿಯು ಸ್ವಾಗತಿಸಿದೆ. ಜನವರಿ 10 ರಂದು ಬೆಂಗಳೂರಿನಲ್ಲಿ ಸೇರಿದ್ದ ರಾಜ್ಯ ಸಮಿತಿ ಸಭೆಯು ನಾಲ್ಕು ಪಕ್ಷಗಳ ಪ್ರಯತ್ನವನ್ನು ಸ್ವಾಗತಿಸುತ್ತಾ, ಈ ಸಂಯುಕ್ತ ಹೋರಾಟ ಪ್ರಯತ್ನದಲ್ಲಿ ಜನತಾ ಪಕ್ಷವೂ ಸಕ್ರಿಯವಾಗಿ ಭಾಗವಹಿಸುವಂತೆ ಆಶಿಸಿದೆ ಮತ್ತು ಜನತಾ ಪಕ್ಷಕ್ಕೆ ಕರೆ ಇತ್ತಿದೆ. ನಾಲ್ಕೂ ಪಕ್ಷಗಳು ರೂಪಿಸಿಕೊಳ್ಳಲು "ತಿರ್ಮಾನಿಸಿರುವ "ಪ್ರಗತಿಪರ ಜನತಂತ್ರ ರಂಗ"ವು ಸ್ಪಷ್ಟವಾದ ಮತ್ತು ನಿರ್ದಿಷ್ಟವಾದ ಬೇಡಿಕೆ ಮತ್ತು ಹೋರಾಟ ಕಾರ್ಯಕ್ರಮಗಳನ್ನು ಒಳಗೊಂಡಿರಬೇಕೆಂದೂ, ರಾಜ್ಯದ ಎಡ ಮತ್ತು ಪ್ರಜಾಪ್ರಭುತ್ವಶಕ್ತಿಗಳು ಇದರಲ್ಲಿ ಪಾಲ್ಗೊಂಡಿರಬೇಕೆಂದೂ ರಾಜ್ಯ ಸಮಿತಿ ಸಭೆಯು ಅಭಿಪ್ರಾಯಪಟ್ಟಿದೆ.

ರೈತ-ಕಾರ್ಮಿಕರ ಚಳುವಳಿಗೆ ಸ್ಪಷ್ಟ ಮತ್ತು ಪ್ರಗತಿಪರ ತಿರುವನ್ನು ನೀಡುವುದಕ್ಕಾಗಿ ಮತ್ತು ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಡಲು ನೇತೃತ್ವ ನೀಡಲು "ರೈತ-ಕಾರ್ಮಿಕ ಹೋರಾಟ ಸಮಿತಿ" ಯೊಂದನ್ನು ರಚಿಸಲಾಗಿದ್ದು, ರೈತರ ಮಹಾ ಪಾದಯಾತ್ರೆಗಳ ಯೋಜನೆ ಹಾಕಿರುವುದನ್ನು ಸಂಪೂರ್ಣ ಸ್ವಾಗತಿಸಿದ ರಾಜ್ಯಸಮಿತಿಯು, ಈ ಕಾರ್ಯಕ್ರಮವನ್ನು ಸಂಪೂರ್ಣ ಯಶಸ್ವಿಗೊಳಿಸಲು ಶ್ರಮಿಸಲು ತನ್ನೆಲ್ಲ ಕೆಳ ಘಟಕಗಳಿಗೆ ಕರೆ ಇತ್ತಿದೆ. ವಿದ್ಯಾರ್ಥಿ, ಯುವ ಜನತೆ ಮತ್ತು ಬುದ್ಧಿಜೀವಿಗಳನ್ನು ದೊಡ್ಡ ರೀತಿಯಲ್ಲಿ ಭಾಗವಹಿಸುವಂತೆ ಮಾಡಿ, ಜನತೆಯ ಐಕ್ಯಹೋರಾಟವನ್ನು ನಡೆಸಲು ಮುಂದಾಗುವುದಕ್ಕೆ ರಾಜ್ಯಸಮಿತಿಯು ಕರೆ ಇತ್ತಿದೆ.

ಸಾರ್ವಜನಿಕ ಕ್ಷೇತ್ರ ನೌಕರರ ಮುಷ್ಕರ :

ಕಳೆದ ಕೆಲವು ದಿನಗಳಿಂದ ನಡೆಯುತ್ತಿರುವ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರವನ್ನು ಮತ್ತು ಸರ್ಕಾರದ ಮೇಲೆ ಒತ್ತಾಯ ತರಲು ಯೋಜಿಸಿರುವ ಬೆಂಗಳೂರು ಬಂದನ್ನು ಸಂಪೂರ್ಣವಾಗಿ ರಾಜ್ಯ ಸಮಿತಿಯು ಬೆಂಬಲಿಸಿದೆ. 1978 ಸೆಪ್ಟೆಂಬರ್‌ನಲ್ಲಿ ಬೆಂಗಳೂರು ಸಾರ್ವಜನಿಕ ಕ್ಷೇತ್ರದ ಕಾರ್ಖಾನೆಗಳಲ್ಲಿ ನಡೆದ ಒಪ್ಪಂದದಪ್ರಕಾರಬಿ.ಎಚ್.ಇ.ಎಲ್. ಕಾರ್ಮಿಕರಿಗೆ ಸರಿಸಮಾನವಾಗಿ ವೇತನ ಕೊಡಬೇಕೆಂಬ ನ್ಯಾಯವಾದ ಬೇಡಿಕೆಯನ್ನು ಮನ್ನಿಸದೆ, ಕಾರ್ಮಿಕ ವಿರೋಧಿ ಧೋರಣೆಯನ್ನು ಅನುಸರಿಸುತ್ತಲಿರುವ ಕೇಂದ್ರ ಸರ್ಕಾರವನ್ನು ಖಂಡಿಸಿದ ರಾಜ್ಯಸಮಿತಿಯು, ತಕ್ಷಣವೇ ಬೇಡಿಕೆ ಈಡೇರಿಸದಿದ್ದಲ್ಲಿ ಎಲ್ಲಾ ಕಾರ್ಮಿಕ ವರ್ಗವನ್ನೆ ಹೋರಾಟಕ್ಕಿಳಿಸಬೇಕಾದೀತೆಂದು ಎಚ್ಚರಿಸಿದೆ.

ಪ್ಲೀನಮ್ ನಿರ್ಣಯ :

ಪಕ್ಷದ ರಾಜ್ಯದ ಪ್ಲೀನಮ್ ಮಾಡಿರುವ ಸಂಘಟನಾ ನಿರ್ಣಯಗಳ ಆಧಾರದಲ್ಲಿ ಮತ್ತು ಜನತೆಯ ಸಮಸ್ಯೆಗಳನ್ನು ಅರ್ಥಮಾಡಿಕೊಂಡು, ಜನತೆಯೊಂದಿಗೆ ಸಂಬಂಧವನ್ನು ಬೆಳೆಸುವುದರ ಮೂಲಕ ಪಕ್ಷವನ್ನು ಬಲಪಡಿಸುವುದು ಮತ್ತು ಎಡ ಪ್ರಜಾಪ್ರಭುತ್ವ ಶಕ್ತಿಗಳು ಒಗ್ಗಟ್ಟಾಗಿ ಮುನ್ನಡೆಯನ್ನು ಸಾಧಿಸುವಂತೆ ಶ್ರಮಿಸಲು ರಾಜ್ಯಸಮಿತಿಯು ತನ್ನೆಲ್ಲಾ ಕೆಳ ಘಟಕಗಳಿಗೆ ಕರೆ ಇತ್ತಿದೆ.

ಜಾಥಾಕ್ಕೆ ಸಂಬಂಧಿಸಿದ ವಿವರಗಳು

1. ಜಾಥಾದಲ್ಲಿ ಭಾಗವಹಿಸುವ ಸದಸ್ಯರ ಪಟ್ಟಿಯನ್ನು ಆಯಾ ಸ್ವಾಗತಸಮಿತಿಗಳು ಸಿದ್ಧಪಡಿಸಿ ಅದರ ಎರಡು ಪ್ರತಿಗಳನ್ನು ಕೇಂದ್ರ ಕಛೇರಿಗೆ ಕಳುಹಿಸಬೇಕು.

12 ಅಂಶಗಳ ಬೇಡಿಕೆಯನ್ನು ಒಪ್ಪಿ ಜಾಥಾದ ಉದ್ದೇಶ ಮತ್ತು ನಿಯಮಗಳಿಗೆ ಬದ್ಧರಾದವರನ್ನು ಮಾತ್ರ ಜಾಥಾದಲ್ಲಿ ಭಾಗವಹಿಸುವ ಸದಸ್ಯರನ್ನಾಗಿ ನೊಂದಾಯಿಸಿಕೊಳ್ಳಬೇಕು.

ಸದಸ್ಯರು ಹಾಗೂ ಸ್ವಯಂಸೇವಕರು ಮತ್ತು ಸ್ವಾಗತ ಸಮಿತಿಯವರು ಧರಿಸಬೇಕಾದ ಬ್ಯಾಡ್ಜ್‌ಗಳನ್ನು ಕೇಂದ್ರ ಕಛೇರಿಯು ಕಳುಹಿಸುವುದು.

2. ಜಾಥಾದ ನಿಯಂತ್ರಣ, ವ್ಯವಸ್ಥೆ ಮತ್ತು ಸಹಾಯಕ್ಕೆ ಸಿದ್ಧವಾಗಿರುವವರನ್ನು ಸ್ವಾಗತಸಮಿತಿಗಳು ಸ್ವಯಂಸೇವಕರನ್ನಾಗಿ ನಿಯಮಿಸಬೇಕು.

3. ಆಯಾ ಸ್ವಾಗತಸಮಿತಿಗಳು ತಮ್ಮ ಗಡಿದಾಟುವವರೆಗೂ ಜಾಥಾದ ಸಂಪೂರ್ಣ ಜವಾಬ್ದಾರಿ ವಹಿಸಿಕೊಂಡು ನಂತರ ಮುಂದಿನ ಸ್ವಾಗತಸಮಿತಿಗೆ ತನ್ನ ಜವಾಬ್ದಾರಿಯನ್ನು ವಹಿಸಿಕೊಡಬೇಕು.

4. ಜಾಥಾದ ಸದಸ್ಯರು ಮತ್ತು ಸ್ವಯಂಸೇವಕರಿಗೆ ಆಯಾ ತಂಗು ಶಿಬಿರಗಳಲ್ಲಿ ಊಟ, ವಸತಿ ಹಾಗೂ ಇತರ ವ್ಯವಸ್ಥೆಯನ್ನು ಅಲ್ಲಿನ ಸ್ವಾಗತ ಸಮಿತಿಗಳು ನಿರ್ವಹಿಸತಕ್ಕದ್ದು. ಜಿಲ್ಲಾ ಸ್ವಾಗತಸಮಿತಿಗಳ ಮೇಲೆ ಹೆಚ್ಚಿನ ಜವಾಬ್ದಾರಿ ಇರುತ್ತದೆ.

5. ಈ ಜಾಥಾದ ಉದ್ದಕ್ಕೂ ವೈದ್ಯಕೀಯ ವ್ಯವಸ್ಥೆ ಇರಲೇಬೇಕು. ಕನಿಷ್ಠ ಇಬ್ಬರು ವೈದ್ಯರನ್ನೊಳಗೊಂಡ ವಾಹನದಲ್ಲಿ ಔಷಧಿ ಹಾಗೂ ಪ್ರಥಮ

(ಕಡೇ ಪುಟ ನೋಡಿ)

ಎಸ್. ಎಫ್. ಐ. ನ ಮೂರನೇ ರಾಜ್ಯ ಸಮ್ಮೇಳನ

ಕೋಲಾರ ಜಿಲ್ಲೆಯ ಚಿಂತಾಮಣಿಯ ಎಸ್. ಎಫ್. ಐ. ಸಂಗಾತಿಗಳು ಒಂದು ತಿಂಗಳ ಮುಂಚಿನಿಂದಲೇ ಸಂಭ್ರಮದಿಂದ ಸಿದ್ಧತೆ ನಡೆಸಿ ಕಾಯುತ್ತಿದ್ದ. ಎಸ್. ಎಫ್. ಐ. ಮೂರನೇ ರಾಜ್ಯ ಸಮ್ಮೇಳನವು ಜನವರಿ 10 ರಂದು ಆರಂಭವಾಯಿತು. ಅಖಿಲ ಭಾರತ ಎಸ್. ಎಫ್. ಐ. ನ ಅಧ್ಯಕ್ಷ ಕಾಂ. ಎಂ. ಎ. ಬೇಬಿಯವರಿಂದ ಎಸ್. ಎಫ್. ಐ. ನ ಧ್ವಜಾರೋಹಣದಿಂದ ಪ್ರಾರಂಭವಾದ ಮೂರುದಿನದ ರಾಜ್ಯ ಸಮ್ಮೇಳನದ ಮೊದಲ ದಿನದ ಕಾರ್ಯಕ್ರಮ ಕಾಂ. ಆರ್. ಜಯಕುಮಾರ್, ಕಾಂ. ನರಸಿಂಹೇ ಗೌಡ, ಕಾಂ. ಪ್ರಕಾಶ್ ಮತ್ತು ಕಾಂ. ಉಮಾಮಹೇಶ್ವರಿ ಯವರುಗಳ ಅಧ್ಯಕ್ಷ ಮಂಡಳಿಯಿಂದ ನಡೆಯಿತು. ರಾಜ್ಯದ ವಿವಿಧ ಭಾಗಗಳಿಂದ 76 ಪ್ರತಿನಿಧಿಗಳು ಮತ್ತು 32 ವೀಕ್ಷಕರು ಸೇರಿ ಒಟ್ಟು 108 ವಿದ್ಯಾರ್ಥಿಗಳು ಭಾಗವಹಿಸಿದ್ದರು.

ಪ್ರಾರಂಭದಲ್ಲಿ ನಿಧನ ಹೊಂದಿದ ರಾಷ್ಟ್ರೀಯ, ಅಂತರ್‌ರಾಷ್ಟ್ರೀಯ ಮುಖಂಡರ ಸ್ಮರಣೆ ಮಾಡಿಕೊಂಡು ಒಂದು ನಿಮಿಷದ ಮೌನಾಚರಣೆಯ ನಂತರ ಕಾಂ. ಕಿಮ್‌ದೆ ಚೊಂಗ್ ಬಗ್ಗೆ ಕೈಗೊಂಡ ಮರಣದಂಡನೆ ತೀರ್ಮಾನ ಖಂಡಿಸಲಾಯಿತು.

ಕಾರ್ಯಕ್ರಮ ಉದ್ಘಾಟಿಸುತ್ತಾ ಬೆಂಗಳೂರು ನ್ಯಾಷನಲ್ ಕಾಲೇಜಿನ ಪ್ರಾಧ್ಯಾಪಕ ಡಾ॥ ರಾಮಕೃಷ್ಣ ಮಾತನಾಡುತ್ತಾ "ಈ ವ್ಯವಸ್ಥೆಯನ್ನು ಸಮರ್ಥಿಸುವ ಕುತಂತ್ರ ವಿದ್ಯಾಭ್ಯಾಸ ಪದ್ಧತಿ ಬದಲಾಗಬೇಕು. ಕ್ರಾಂತಿಕಾರಿ ಬದಲಾವಣೆಗೆ, ತಾತ್ವಿಕ ಮಟ್ಟದಲ್ಲಿ ಕರ್ಮಸಿದ್ಧಾಂತವಂತೆ ಕ್ರಾಂತಿಗೂ ಒಂದು ಸಿದ್ಧಾಂತವಿದೆ" ಎಂದರು. ಮುಂದುವರೆದು ಅವರು ವಿದ್ಯಾಭ್ಯಾಸದಲ್ಲಿ ಸರಕಾರ ಹಣತೊಡಗಿಸುವ ಪದ್ಧತಿಯಲ್ಲಿನ ನ್ಯೂನತೆ ವಿವರಿಸುತ್ತ ಯು. ಜಿ. ಸಿ. ಕೊಡು ಕಾಸಿಪ್ ಗ್ರ್ಯಾಂಟ್ ಕೇವಲ ನ್ಯಾಷನಲ್ ಕಾಲೇಜು, ಡಿ. ವಿ. ಎಸ್. ಕಾಲೇಜು ಅಂತಹ ಕಾಲೇಜುಗಳಿಗೆ ಕೊಡುತ್ತದೆ, 'ಯಾರಿಗಿದೆಯೋ ಅವರಿಗೆ ಕೊಡುವ' ಈ ಧೋರಣೆ ಸರಿಯಲ್ಲ. "ಅಲ್ಲದೆ ಉಚ್ಚವರ್ಗದ ಹಿತಾಸಕ್ತಿಗಳನ್ನು ಮಾತ್ರ ಕಾಪಾಡುವಂತಹ ವಿದ್ಯೆಯನ್ನು ಕೊಡಲಾಗುತ್ತಿದೆ ಇದೊಂದು ದುರಂತ. ಕಡ್ಡಾಯ ಶಿಕ್ಷಣ ಒಂದು ಥೋಂಗಿ ಘೋಷಣೆ ಡಾ॥ ಕೆ. ಎನ್. ರಾಜ್ ಅವರ ವರದಿಯ ಪ್ರಕಾರ ನಮ್ಮ ರಾಜ್ಯದಲ್ಲಿ ಶೇ. 50 ಮಂದಿ ಮಾತ್ರ ಪ್ರಾಥಮಿಕ ಶಾಲೆಯ ವರೆಗೂ, 7 ಮಂದಿಯಲ್ಲಿ ಒಬ್ಬ ಎಸ್. ಎಸ್. ಎಲ್. ಸಿ. ವರೆಗೂ ಶೇಕಡಾ 3 ಮಂದಿ ವಿಶ್ವವಿದ್ಯಾಲಯಕ್ಕೆ ಹೋಗುತ್ತಾರೆ ಎಂಬುದು ವಿಷಾದನೀಯ ಅಂಶ. ವಿದ್ಯಾರ್ಥಿಗಳಲ್ಲಿ 'ಅಶಿಸ್ತು ಇದೆ' ಎಂಬುದು ತಪ್ಪು ಅಭಿಪ್ರಾಯ. ಪರಿಸರದ ಎಲ್ಲ ರಂಗದಲ್ಲೂ ಅಶಿಸ್ತು ಇರುವಾಗ ಇಲ್ಲಿಯೂ ಇದ್ದರೆ ಅಚ್ಚರಿ ಏನಿಲ್ಲ. ಒಟ್ಟಿನಲ್ಲಿ ನಮ್ಮ ವಿದ್ಯೆ (Education for sale) ಎಂಬಂತೆ ಮಾರುಕಟ್ಟೆಯ ವಸ್ತುವಾಗಿದೆ ಎಂದರು. ನಂತರ ಅತಿಥಿಯಾಗಿ ಆಗಮಿಸಿದ ಡಾ॥ ಬಿ. ಕೆ. ಚಂದ್ರಶೇಖರ್ ಮಾತನಾಡಿ ವಿದ್ಯಾರ್ಥಿಗಳು ತಮ್ಮ ಪರಿಸರದಲ್ಲಿ ನಡೆಯುವ ಎಲ್ಲ ಚಟುವಟಿಕೆಗಳನ್ನು ಹರಿತವೈಚಾರಿಕತೆಯಿಂದ ಅಧ್ಯಯನ ಮಾಡುವ ಹವ್ಯಾಸ ಬೆಳೆಸಿಕೊಳ್ಳಲು ಕರೆಯಿತ್ತರು.

ಮಧ್ಯಾಹ್ನದ ಅಧಿವೇಶನದಲ್ಲಿ ಕಾಂ. ಬೇಬಿಯವರು ಮಾತನಾಡುತ್ತ "ಇಂತಹ ಸಮ್ಮೇಳನಗಳಲ್ಲಿ ನಡೆಯುವ ಚರ್ಚೆಯು ಸಂಘಟನೆಯಲ್ಲಿ ಬರುವ ತಪ್ಪುಗಳನ್ನು, ತೊಂದರೆಗಳನ್ನು ತಿದ್ದಿಕೊಳ್ಳಲು, ನಮ್ಮ ಸಾಧನೆಗಳನ್ನು ಗುರುತಿಸಿಕೊಳ್ಳಲು ಸಹಕಾರಿಯಾಗುತ್ತದೆ. ಚರ್ಚೆಯಲ್ಲಿ ರಾಜ್ಯಸಮಿತಿ ಹಾಗೂ ಕೇಂದ್ರಸಮಿತಿ ಎಲ್ಲಾ ಸೃಜನಾತ್ಮಕ ಟೀಕೆಯನ್ನು ಸ್ವೀಕರಿಸುತ್ತದೆ. ಎಲ್ಲಾ ಸಂಗಾತಿಗಳು ತುಲನಾತ್ಮಕ ವಿಮರ್ಶನ ಅಭ್ಯಾಸವನ್ನು ಬೆಳೆಸಿಕೊಳ್ಳಬೇಕು ಮತ್ತು ಅದನ್ನು ವೈಯಕ್ತಿಕ ಜೀವನದಲ್ಲೂ ಉಳಿಸಿಕೊಳ್ಳಬೇಕು. ಸಂಘಟನೆಯ ಹಾದಿಯಲ್ಲಿ ಏನುಮಾಡಲು ಸಾಧ್ಯವಿಲ್ಲದಾಗ ಆಬಗ್ಗೆ ನಿಮಗೆ ನೀವೇ ಶಿಕ್ಷಣ ಕೊಟ್ಟುಕೊಳ್ಳುವುದೂ ಸಹ ಸಂಘಟನೆಯ ಕೆಲಸವಾಗುತ್ತದೆ" ಎಂದರು. ಮುಂದುವರೆದ ಅವರು "ಈ ರಷ್ಯಾ ಪ್ರಪಂಚ ಸಮಾಜವಾದಿ ರಾಷ್ಟ್ರಗಳಾಗಿವೆ ಬಂಡವಾಳಶಾಹಿಗಳ ಹಿಡಿತದಿಂದ ಮುಕ್ತವಾದ ಅವು ಪರಿಪೂರ್ಣ ಸಮಾಜವಾದಿ ರಾಷ್ಟ್ರನಿರ್ಮಾಣದ ಹಾದಿಯಲ್ಲಿದೆ. ಹೀಗಿರುವಾಗ ಅವು ಒಂದನ್ನೊಂದು ಟೀಕಿಸಿದರೂ ಅವು ಭ್ರಾತೃ ಭಾವನೆಯದ್ದಾಗಿದ್ದು ಮುಂದೊಂದು ದಿನ ಅವುಗಳೆಲ್ಲ ಒಂದಾಗುವ ದಿನ ಬರುತ್ತದೆ" ಎಂದರು.

ಎಸ್.ಎಫ್.ಐ.ನ ರಾಜ್ಯಸಮಿತಿಯ ಪ್ರಧಾನಕಾರ್ಯದರ್ಶಿ ಕಾಂ. ಶಾಂತರೇಣುಕಾರಾಧ್ಯ 16 ಪುಟಗಳ ಸುದೀರ್ಘ ಮೂರನೆ ರಾಜ್ಯಸಮ್ಮೇಳನದ ಕರಡು ವರದಿಯನ್ನು ಮಂಡಿಸಿದರು.

ಸ್ವಾಗತ ಸಮಿತಿಯ ಅಧ್ಯಕ್ಷ ಕಾಂ. ಜಿ. ವಿ. ಅಶ್ವತ್ಥನಾರಾಯಣ ರೆಡ್ಡಿಯವರಿಂದ ಸ್ವಾಗತ, ರೇಣುಕಾರಾಧ್ಯರಿಂದ ವಂದನಾರ್ಪಣೆಯಲ್ಲಿ ಮುಗಿದ ಅಂದಿನ ಕಾರ್ಯಕ್ರಮದಲ್ಲಿ ಎಸ್.ಎಫ್.ಐ.ನ ಕಾಂ. ಸಿದ್ಧಲಿಂಗೆ ಸ್ವಾಮಿ, ಚಿಂತಾಮಣಿ ಎಸ್.ಎಫ್.ಐ. ಶಾಖೆಯ ಸ್ಥಾಪಕ ಸದಸ್ಯ ಕಾಂ. ಗೋಪಾಲಗೌಡ, ಪ್ರಜಾಸತ್ತಾತ್ಮಕ ಯುವಜನ ಸಂಘಟನೆಯ ಕಾಂ. ಜಿ. ವಿ. ಶ್ರೀರಾಮರೆಡ್ಡಿಯವರು ಶುಭ ಹಾರೈಕೆ ಮಾಡಿದರು. ಸಮ್ಮೇಳನದ ಎರಡನೆಯ ದಿನವಾದ 11ರಂದು ರಾಜ್ಯಸಮಿತಿಯ ಕರಡು ವರದಿಯ ಬಗ್ಗೆ ಚರ್ಚೆ, ಟೀಕೆ, ಸಲಹೆಗಳು ನಡೆದವು. ಚರ್ಚೆಯಲ್ಲಿ ದಕ್ಷಿಣ ಕನ್ನಡ ಜಿಲ್ಲೆ, ತುಮಕೂರು, ಕೋಲಾರ, ಮೈಸೂರು, ಚಿಕ್ಕಮಗಳೂರು, ಬೆಂಗಳೂರು, ಶಿವಮೊಗ್ಗ, ಕೊಡಗು, ಧಾರವಾಡ, ಬಿಜಾಪುರ, ರಾಯಚೂರು, ಬಳ್ಳಾರಿ, ಮಂಗಳೂರು ಒಟ್ಟು 12 ಜಿಲ್ಲೆಗಳ ನಾಲ್ಕು ಜನ ವಿದ್ಯಾರ್ಥಿನಿಯರೂ ಸೇರಿದಂತೆ 47 ಜನ ಸಂಗಾತಿಗಳು ಚರ್ಚೆಯಲ್ಲಿ ಭಾಗವಹಿಸಿದರು. ಎಸ್.ಎಫ್.ಐ.ನ ಸಂಘಟನೆ ಬೆಳೆಸುವತ್ತ ಹಲವಾರು ಸೃಜನಾತ್ಮಕ ಟೀಕೆಗಳು ಬಂದವು. ಚರ್ಚೆಯಲ್ಲಿ ಪಾಲ್ಗೊಂಡ ವಿದ್ಯಾರ್ಥಿನಿಯರು ಮಹಿಳೆಯರ ಸಮಸ್ಯೆಗಳನ್ನು, ಮಹಿಳಾ ವಿದ್ಯಾರ್ಥಿಗಳ ಸಮಸ್ಯೆಗಳನ್ನು ಮತ್ತು ವಿದ್ಯಾರ್ಥಿನಿಯರನ್ನು ಹೆಚ್ಚು ಎಸ್.ಎಫ್.ಐ. ಸಂಘಟನೆಯಲ್ಲಿ ಬರುವಂತೆ ಮಾಡುವತ್ತ ಗಮನ ಸೆಳೆಯುವ ಸಲಹೆಗಳನ್ನಿತ್ತರು.

ನಂತರ ಬೆಂಗಳೂರು ಜಿಲ್ಲಾ ರೈತಸಂಘ, ಕೋಲಾರ ಜಿಲ್ಲಾ ಜನರಲ್ ವರ್ಕರ್ಸ್ ಯೂನಿಯನ್‌ನ ಕಾಂ. ಶ್ರೀನಿವಾಸರೆಡ್ಡಿ, ಕಾಂ. ಕೆ. ಎಂ. ವೆಂಕಟೇಶ್ (ರೈತಸಂಘ), ಜಿಲ್ಲಾ ರೈತಸಂಘದ ಪ್ರಧಾನಕಾರ್ಯದರ್ಶಿ ಲಕ್ಷ್ಮಣರೆಡ್ಡಿ, ಮಾರ್ಕಿಸ್ಟ್ ಕಮ್ಯುನಿಸ್ಟ್ ಪಕ್ಷದ ರಾಜ್ಯ ಪ್ರಧಾನ ಕಾರ್ಯದರ್ಶಿ ಕಾಂ. ಎಂ. ಕೆ. ಭಟ್, ಪ್ರಾಂತ ರೈತಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ಪಿ. ರಾಮಚಂದ್ರರಾವ್ ಅವರು ಶುಭಾಶಯ ನೀಡಿದರು.

ಎರಡು ದಿನದಿಂದ ಆಗಲೇ ಆತ್ಮೀಯತೆ ಬೆಳೆಸಿಕೊಂಡ ಸಂಗಾತಿಗಳಲ್ಲಿ ಲವಲವಿಕೆಯು ಗರಿಷ್ಠ ಮಟ್ಟದ ಸಂಭ್ರಮದಲ್ಲಿ ಆರಂಭವಾದ ಮೂರನೆ ಹಾಗೂ ಕಡೆಯ ದಿನದಂದು ಹಿಂದಿನ ದಿನದ ಚರ್ಚೆಗೆ ಕಾಂ. ಆರಾಧ್ಯ ಉತ್ತರ ರೂಪದ ಭಾಷಣದಲ್ಲಿ "ಸಂಘಟನೆಯಲ್ಲಿ ಸಾಮೂಹಿಕ ನಾಯಕತ್ವವಿದ್ದರೆ ಮಾತ್ರ ಯಶಸ್ಸು. ಸಂಘಟನೆ ಬೆಳೆಯುವುದು ರಾಜ್ಯಸಮಿತಿಯದೊಂದೇ ಜವಾಬ್ದಾರಿಯಲ್ಲ ಅದರ ಬಗ್ಗೆ ಜಿಲ್ಲಾ ಶಾಖೆಗಳಿಗೂ ಜವಾಬ್ದಾರಿಯಿದೆ. ಹೋರಾಟ-ಶಿಕ್ಷಣ ಒಂದಕ್ಕೊಂದು ಪೂರಕವಾದ ಸಂಗತಿ, ಅದರ ಬಗ್ಗೆಯೂ ಗಮನವಹಿಸಬೇಕು. ಸಂಘಟನೆಯಲ್ಲಿ "ಕ್ವಾಲಿಟೇಟಿವ್ ಹಾಗೂ ಮಾಸ್" ಎರಡನ್ನು ಹೆಚ್ಚಿಸುವುದೇ ಒಳ್ಳೆಯ ಸಂಘಟನೆ. ಪ್ರಾಂತ ಸಮಿತಿಯಿಂದ ಜಿಲ್ಲಾಶಾಖೆ ಇಂದ ರಾಜ್ಯಸಮಿತಿಯಿಂದ ಕೇಂದ್ರಸಮಿತಿ ಹೀಗೆ ಸಂಪರ್ಕದ ಕೊಂಡಿ ಇರುತ್ತದೆ. ಪ್ರಾಂತ ಶಾಖೆಯ ಹೆಚ್ಚಿನ ಎಲ್ಲಾ ಜವಾಬ್ದಾರಿಯನ್ನು ಜಿಲ್ಲಾ ಶಾಖೆ ವಹಿಸಿಕೊಳ್ಳಬೇಕು. ಆದರೂ ಪ್ರಾಂತ ಸಮಿತಿಯ ಚಟುವಟಿಕೆಯ ಬಗ್ಗೆ ಕೇಂದ್ರಸಮಿತಿಯು ಗಮನವಿರುತ್ತದೆ. ಕೇಂದ್ರ ಹಾಗೂ ರಾಜ್ಯ ಸಮಿತಿಯೊಡನೆ ಎಲ್ಲಾ ಘಟಕಗಳು ನಿಯತಕಾಲಿಕವಾಗಿ ಸಂಪರ್ಕವಿಟ್ಟುಕೊಳ್ಳುವುದು ಪರಸ್ಪರ ವಿಚಾರ ವಿನಿಮಯ, ಮುಂದಾಲೋಚನಗೆ ಸಹಕಾರಿಯಾಗುತ್ತದೆ. ಸೂಕ್ತಕ್ರಮ ಕೈಗೊಳ್ಳಲು ಉಪಯೋಗವಾಗುತ್ತದೆ ಎಂದರು.

ಮುಂದುವರಿದು "ಸಂಘಟನೆ ಬೆಳೆಸುವಲ್ಲಿ ಹೈಸ್ಕೂಲು ವಿದ್ಯಾರ್ಥಿಗಳ ಬಗ್ಗೆಯೂ ವೃತ್ತಿಪರ ಶಿಕ್ಷಣಾರ್ಥಿಗಳ ಬಗ್ಗೆಯೂ ಗಮನ ವಹಿಸಬೇಕಾಗಿದೆ. ವಿದ್ಯಾರ್ಥಿನಿಯರನ್ನು ಎಸ್. ಎಫ್. ಐ. ಸಂಘಟನೆಯಲ್ಲಿ ತರಲು ವಿಶೇಷ ಗಮನ ಹಾಗೂ ನಡವಳಿಕೆಯನ್ನು ಬೆಳೆಸಿಕೊಳ್ಳಬೇಕಿದೆ. ಕ್ರೀಡಾ ಸ್ಪರ್ಧೆ ಹಾಗೂ ಇತರ ಚಟುವಟಿಕೆಗಳನ್ನು ಸಂಘಟನೆಯನ್ನು ಬೆಳೆಸುವ ದೃಷ್ಟಿಯಿಂದ ಪ್ರೋತ್ಸಾಹಿಸಬೇಕಾಗಿದೆ.

ಅವರೊಟ್ಟಿಗೇನೆ ಎಸ್.ಎಫ್.ಐ. ತನ್ನ ಸದಸ್ಯರ ಸಾಂಸ್ಕೃತಿಕ ಚಟುವಟಿಕೆಯ ಬಗ್ಗೆ ಅಂದರೆ ಆಟದ ಸ್ಪರ್ಧೆಗಳಲ್ಲಿ, ಕಲೆ, ನಾಟಕ ಇತರ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವ ಅಭ್ಯಾಸ ಬೆಳೆಸಿಕೊಳ್ಳಲು ಹೇಳಿದರು. ರಾಜ್ಯಸಮಿತಿಯ ಬಗೆಗಿನ ಟೀಕೆಗಳು ಗಮನದಲ್ಲಿಡಲಾಗಿದೆ ಎಂದರು.

ನಂತರ ಖಂಡನಾ ನಿರ್ಣಯ, ಬೆಂಬಲಗಳನ್ನು ಸೂಚಿಸಿದ ಮೇಲೆ ಶೈಕ್ಷಣಿಕ ಹಾಗು ರಾಜಕೀಯ ಠರಾವುಗಳನ್ನು ಓದಲಾಯ್ತು. ಸಭೆಯು ಹರ್ಷದಿಂದ ಠರಾವುಗಳನ್ನು ಸ್ವಾಗತಿಸಿತು. ಎಸ್. ಎಫ್. ಐ.ನ ಹೊಸ ರಾಜ್ಯಸಮಿತಿಯು ರಚನೆಗೊಂಡು ಅದೂ ಸಹ ಸಭೆಯಲ್ಲಿ ಸಂತೋಷದಿಂದ ಅಂಗೀಕೃತವಾಯ್ತು. ಹೊಸ ರಾಜ್ಯಸಮಿತಿಯ ಆಯ್ಕೆಗೊಂಡವರ ಹೆಸರು ಕ್ರಮವಾಗಿ ಹೀಗಿದೆ. ಅಧ್ಯಕ್ಷ ಜಯಕುಮಾರ್ (ಮಂಗಳೂರು), ಉಪಾಧ್ಯಕ್ಷರುಗಳಾಗಿ ಕಾಂ. ರುದ್ರಪ್ಪಕಾಯಿ (ಧಾರವಾಡ) ಮತ್ತು ಕಾಂ. ರಾಜಣ್ಣ (ಬೆಂಗಳೂರು), ಪ್ರಧಾನ ಕಾರ್ಯದರ್ಶಿಯಾಗಿ ಎಸ್. ಆರ್. ಆರಾಧ್ಯ (ಬೆಂಗಳೂರು), ಕಾರ್ಯದರ್ಶಿಗಳು ಕಾಂ. ನರಸಿಂಹಗೌಡ (ಮೈಸೂರು) ಬಸವರಾಜ್ (ರಾಯಚೂರು). ಖಜಾಂಚಿಯಾಗಿ ಕಾಂ. ಗೋಪಾಲಕೃಷ್ಣ (ಬೆಂಗಳೂರು) ಮತ್ತು 24 ಸದಸ್ಯರು ಆಯ್ಕೆಯಾಗಿದ್ದಾರೆ.

ರಾಜ್ಯಸಮಿತಿಗೆ ಆಯ್ಕೆಯಾದ ಸದಸ್ಯರುಗಳ ಹೆಸರುಗಳು ಈ ರೀತಿ ಇವೆ. ದ.ಕ. ಜಿಲ್ಲೆಯಿಂದ ಕಾಂ. ಉಮೇಶ್ ಭಂಡಾರಿ, ಜಗನ್ನಾಥ ರೈ ಮತ್ತು ಕಾಂ. ಉಮಾಮಹೇಶ್ವರಿ. ತುಮಕೂರು ಜಿಲ್ಲೆಯಿಂದ ಕಾಂ. ಕೆ. ನಾಗರಾಜ್ ಮತ್ತು ಕಾಂ. ರಾಜಶೇಖರಯ್ಯ. ಕೋಲಾರ ಜಿಲ್ಲೆಯಿಂದ ಕಾಂ. ಹರೀಂದ್ರ, ಎಸ್. ವಿ. ಜಗನ್ನಾಥ ಮತ್ತು ಕಾಂ. ವೀರಪ್ಪರೆಡ್ಡಿ. ಚಿಕ್ಕಮಗಳೂರು ಜಿಲ್ಲೆಯಿಂದ ಕಾಂ. ಎಸ್. ವಿ. ಪ್ರಕಾಶ್. ಮೈಸೂರು ಜಿಲ್ಲೆಯಿಂದ ಕಾಂ. ಬಸವಲಿಂಗಪ್ಪ, ಧಾರವಾಡ ಜಿಲ್ಲೆಯಿಂದ ಕಾಂ. ಪಿ. ಉಷಾ. ಬಿಜಾಪುರ ಜಿಲ್ಲೆಯಿಂದ ಕಾಂ. ಶಾಂತಕುಮಾರ. ಉ. ಕ. ಜಿಲ್ಲೆಯಿಂದ ಕಾಂ. ಕಟ್ಟಿಗೆ. ಬೀದರ್ ಜಿಲ್ಲೆಯಿಂದ ಕಾಂ. ದತ್ತಾತ್ರರಾವ್. ಕೊಡಗು ಜಿಲ್ಲೆಯಿಂದ ಕಾಂ. ಎಚ್. ಕೆ. ಮಧು. ಗುಲ್ಬರ್ಗಾ ಜಿಲ್ಲೆಯಿಂದ ಕಾಂ. ವಿಶ್ವನಾಥ ಹೊನ್ನಳ್ಳಿ, ಮತ್ತು ಕಾಂ. ಶಿವಹರಣ ದೊಡಮನಿ. ಬಳ್ಳಾರಿ ಜಿಲ್ಲೆಯಿಂದ ಕಾಂ. ರವಿವರ್ಮ. ಬೆಳಗಾಂ ಜಿಲ್ಲೆಯಿಂದ ಕಾಂ. ಕೂಡ್ಲಿಮಠ. ಶಿವಮೊಗ್ಗ ಜಿಲ್ಲೆಯಿಂದ ಕಾಂ.ಕೊಟ್ರೇಶ್. ಎಸ್. ಎಫ್. ಐ.ನ ಕೇಂದ್ರ ಅಧ್ಯಕ್ಷ ಕಾಂ. ಬೇಬಿಯವರು ಮತ್ತು ಆಗತಾನೆ ಆಗಮಿಸಿದ ಎಸ್.ಎಫ್. ಐ.ನ ಕೇಂದ್ರ ಸಮಿತಿಯ ಸಹಕಾರ್ಯದರ್ಶಿ ಹಾಗೂ ಲೋಕಸಭಾ ಸದಸ್ಯ ಕಾಂ. ಸೈಫುದ್ದೀನ್ ಚೌದರಿ ಅವರ ಭಾಷಣದೊಡನೆ ಸಮ್ಮೇಳನ ಯಶಸ್ವಿಯಾಗಿ ಮುಕ್ತಾಯಗೊಂಡಿತು.

[7ನೇ ಪುಟ ನೋಡಿ]

ಸಮ್ಮೇಳನ ಯಶಸ್ವಿಗೊಳಿಸಲು ಶ್ರಮಿಸಿದವರಿಗೆ ಅಭಿನಂದನೆ

ಜನವರಿ 10ರಿಂದ 12ರವರೆಗೆ ಚಿಂತಾಮಣಿಯಲ್ಲಿ ನಡೆದ ಕರ್ನಾಟಕ ರಾಜ್ಯ 3ನೇ ಎಸ್. ಎಫ್. ಐ. ಸಮ್ಮೇಳನ ಯಶಸ್ವಿಯಾಗಲು ಶ್ರಮಿಸಿದ ಸ್ವಾಗತ ಸಮಿತಿ ಅಧ್ಯಕ್ಷ ಕಾಂ. ಜಿ. ವಿ. ಅಶ್ವತ್ಥನಾರಾಯಣರೆಡ್ಡಿ ಮತ್ತು ಇತರ ಹಿತೈಷಿಗಳಿಗೆ, ಸ್ವಯಂಸೇವಕರಿಗೆ ಎಸ್. ಎಫ್. ಐ. ರಾಜ್ಯಸಮಿತಿಯು ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಎಸ್. ಆರ್. ಆರಾಧ್ಯ
ಪ್ರಧಾನಕಾರ್ಯದರ್ಶಿ
ಎಸ್. ಎಫ್. ಐ. ಕರ್ನಾಟಕ ರಾಜ್ಯ

ಸ್ವಾತಂತ್ರ್ಯ ಹೋರಾಟದ ಎಲ್ಲಾ ಮೌಲ್ಯಗಳ ವಿರೋಧಿ

ಡಿಸೆಂಬರ್ ೨೨ರಂದು ರಾಜ್ಯಸಭೆಯಲ್ಲಿ ರಾಷ್ಟ್ರೀಯ ಭದ್ರತಾ ಶಾಸನದ ಮೇಲೆ ಕಾಂ. ಹರ್‌ಕಿಶನ್ ಸಿಂಗ್ ಸುರಜೀತ್ ಅವರು ಮಾಡಿದ ಭಾಷಣದ ಸಂಗ್ರಹಾನುವಾದ ಕೆಳಗೆ ಕೊಡಲಾಗಿದೆ :

ಜಾಲಿಯನ್‌ವಾಲಾದ ಮತ್ತು ಕೌಲತ್ ಕಾಯಿದೆಯ ವಿರುದ್ಧ ಹೋರಾಡಿದ ಶೂರರ ನಾಡಿನಿಂದ ಬಂದಿರುವ, ಸ್ವತಃ ರಾಜಕೀಯ ಸಂತ್ರಸ್ತರಾಗಿದ್ದ ನನ್ನ ಮಿತ್ರ ಗಿಯಾನಿ ಜೈಲ್‌ಸಿಂಗ್, ಈ ಕ್ರೂರ ಕಾಯಿದೆಯನ್ನು ಇಲ್ಲಿ ಮಂಡಿಸಬೇಕಾಗಿಬಂದಿರುವುದು ತೀರಾ ವಿಷಾದನೀಯ ಸಂಗತಿ. ಈ ಕಾಯಿದೆ ನಮ್ಮ ಸ್ವಾತಂತ್ರ್ಯ ಹೋರಾಟದಿಂದ ರೂಪುಗೊಂಡ ಎಲ್ಲಾ ಮೌಲ್ಯಗಳನ್ನು ನಾಶಮಾಡುತ್ತದೆ. ಅದಕ್ಕೆಂದೇ ಬಹುಶಃ ಇಂದು ಇಲ್ಲಿ ಯಾರೂ ಮಹಾತ್ಮಗಾಂಧಿಯವರು ಸ್ವಾತಂತ್ರ್ಯ ಹೋರಾಟದ ಸಮಯದಲ್ಲಿ ನೆಹರೂ ಲಕ್‌ನೋ ಕಾಂಗ್ರೆಸ್‌ನಲ್ಲಿ ಮುನ್ನೆಚ್ಚರಿಕೆ ಸ್ಥಾನಬದ್ಧತೆ (preventive detention) ಬಗ್ಗೆ ಹೇಳಿದ್ದನ್ನು ಉದ್ಧರಿಸುತ್ತಿಲ್ಲ.

ಒಂದೇ ವರ್ಷದಲ್ಲಿ ಅದೇ ಹಳೆ ತೀರ್ಮಾನಕ್ಕೆ

1971ರ ಚುನಾವಣೆಗಳ ನಂತರ; ಆಗಿನ ಸರ್ಕಾರಕ್ಕೆ ಜನರ ಸಮಸ್ಯೆಗಳನ್ನು ಬಗೆಹರಿಸುವುದು ಸಾಧ್ಯವಿಲ್ಲ, ಸಮಾಜವಾದದ ಮಾತುಗಳನ್ನು ಕೃತಿಗಿಳಿಸುವುದು ಸಾಧ್ಯವಿಲ್ಲ, 'ಗರೀಬಿ ಹಟಾವೊ' ಕಾರ್ಯಕ್ರಮ ಸಹ ಕಾರ್ಯಸಾಧ್ಯವಲ್ಲ ಎಂದು ಮನವರಿಕೆಯಾಗಲು ಹೆಚ್ಚು ಸಮಯ ಬೇಕಾಗಿತ್ತು. ಇದಾವುದೇ ಘೋಷಣೆ, ಕಾರ್ಯಕ್ರಮಗಳಿಂದ ಜನರನ್ನು ಆಳಲು ಸಾಧ್ಯವಿಲ್ಲ. ದುಡಿಯುವ ಜನರ ಚಳುವಳಿಗಳನ್ನು, ಜನರ ಪ್ರಜಾಸತ್ತಾತ್ಮಕ ಆಕಾಂಕ್ಷೆಗಳನ್ನು ದಮನ ಮಾಡುವ ತುರ್ತುಪರಿಸ್ಥಿತಿಯ ಮೂಲಕ ಮಾತ್ರ ಇದು ಸಾಧ್ಯ ಎಂದು 1975ರಲ್ಲಿ ಮನಗಂಡಿತು.

ಈಗಿನ ಸರ್ಕಾರ ಇದೇ ತೀರ್ಮಾನಕ್ಕೆ ಕೇವಲ ಒಂದು ವರ್ಷದ ಒಳಗೇನೇ ಬಂದಿದೆ ಎಂದು ನನಗೆ ಆಶ್ಚರ್ಯವಾಗುತ್ತದೆ. ಇವರು ಬೆಲೆಗಳನ್ನು ಇಳಿಸುವ ಜನರ ಸಮಸ್ಯೆಗಳನ್ನು ಬಗೆಹರಿಸುವ ಘೋಷಣೆಗಳಿಂದ ಅಧಿಕಾರಕ್ಕೆ ಬಂದರು. ಆದರೆ ಇಷ್ಟು ಬೇಗ ಸಮಾಜ ವಿರೋಧಿ ಶಕ್ತಿಗಳನ್ನು ನಿಯಂತ್ರಿಸುವ, ಕಾನೂನು ಮತ್ತು ವ್ಯವಸ್ಥೆಯ ಪರಿಸ್ಥಿತಿಯ ಬಗ್ಗೆ ಮಾತನಾಡುತ್ತಿದ್ದಾರೆ. ಇದರ ಸಾರಾಂಶವಿಷ್ಟೆ. ಜನರ ಸಮಸ್ಯೆಗಳನ್ನು ಪರಿಹರಿಸುವುದರಲ್ಲಿ ಸೋತು ವಿಷಯ ಬದಲಾಯಿಸುತ್ತಿದ್ದಾರೆ.

ಹಣದುಬ್ಬರ ದಿನೇದಿನೇ ಏರುತ್ತಿದೆ. ಇದನ್ನು ನಿಯಂತ್ರಿಸುವ ಮಾತು ಬರಿಯ ಮಾತಾಗಿ ಉಳಿದಿದೆ. ಬಡಜನರು ಇದರಿಂದ ಹೆಚ್ಚು ಕಷ್ಟಕ್ಕೊಳಗಾಗುವವರು. ಅವರಿಂದ ಬೆಲೆ ಇಳಿಸಲು ಸಾಧ್ಯವಾಗಿಲ್ಲ. ರೈತರಿಗೆ ಉಚಿತ ಬೆಲೆಗಳನ್ನು ನಿರ್ಧರಿಸಲು ಆಗಿಲ್ಲ. ನಿರುದ್ಯೋಗ ನಿವಾರಿಸಲು, ತಾರತಮ್ಯ ನೀಗಲು ಸಾಧ್ಯವಾಗಿಲ್ಲ. ಜನರಿಗೆ ಆಹಾರ, ವಸತಿ ಒದಗಿಸಲು ಸಾಧ್ಯವಾಗಿಲ್ಲ. ಜನರ ಯಾವುದೇ ಬೇಡಿಕೆ, ಆಕಾಂಕ್ಷೆಗಳನ್ನು ಪೂರೈಸಲು ಪೂರ್ಣವಾಗಿ ವಿಫಲವಾಗಿದೆ. ಆದ್ದರಿಂದ ಇನ್ನುಳಿದಿರುವ ಒಂದೇ ಉಪಾಯ ಆ ಬೇಡಿಕೆ, ಆಕಾಂಕ್ಷೆಗಳನ್ನು ಅದನ್ನು ಮುಂದಿಟ್ಟು ನಡೆಸುವ ಚಳುವಳಿಗಳನ್ನು ಕ್ರೂರವಾಗಿ ದಮನಕ್ಕೊಳಪಡಿಸುವುದು. ಕ್ರಿಮಿನಲ್ ಕಾಯಿದೆಗಳನ್ನು ಇನ್ನೂ ಕ್ರೂರವಾಗುವಂತೆ ತಿದ್ದುಪಡಿ ಮಾಡಲಾಗಿದೆ. ಇದೇ ರಾಷ್ಟ್ರೀಯ ಭದ್ರತಾ ಶಾಸನದ ಹಿನ್ನೆಲೆ. ಬರಿ ಇದರಿಂದ

ರಾಷ್ಟ್ರೀಯ ಭದ್ರತಾ ಶಾಸನದ ವಿರುದ್ಧ ಕಾಂ. ಸುರಜೀತ್ ಅವರ ದನಿ

ಅವರು ತೃಪ್ತಿ ಹೊಂದಿಲ್ಲ. ಅಧ್ಯಕ್ಷೀಯ ಪದ್ಧತಿಗೆ ಬದಲಾಯಿಸುವ ಪ್ರಚಾರವನ್ನೂ ಮಾಡಲಾಗುತ್ತಿದೆ. ಇನ್ನೂ ಕರಾಳ ದಿನಗಳು ಬರಲಿವೆ. ಈ ಕಾಯಿದೆ ಅದರ ಬಗ್ಗೆ ಎಚ್ಚರಿಕೆಯ ನುಡಿ ಮಾತ್ರ.

ಈ ಕ್ರಮಗಳು ಏಕೆ ?

ಇವರು ಈ ಕ್ರಮಗಳಿಗಾಗಿ ಏಕೆ ಮುಂದಾಗುತ್ತಿದ್ದಾರೆ ? ಇವರಿಗೆ ಸ್ವಾತಂತ್ರ್ಯ ಮತ್ತು ಪ್ರಜಾಪ್ರಭುತ್ವ ಬೇರೆಬೇರೆಯಾಗಿ ಇರಲಾರವು ಎಂದು ಮರೆತು ಹೋಗಿದೆಯೆ ? ಸ್ವಾತಂತ್ರ್ಯ ಚಳುವಳಿಯಲ್ಲಿ ಜನರಿಗೆ ನಾವು ಯಾವಾಗಲೂ ಹೇಳುತ್ತಿದ್ದುದು ಪ್ರಜಾಪ್ರಭುತ್ವವಿಲ್ಲದ, ಆರ್ಥಿಕ ಸ್ವಾತಂತ್ರ್ಯವಿಲ್ಲದ ಸ್ವಾತಂತ್ರ್ಯ ಸ್ವಾತಂತ್ರ್ಯವೇ ಅಲ್ಲ.

ಈ ಆರ್ಥಿಕ ಸ್ವಾತಂತ್ರ್ಯವನ್ನು ಗಳಿಸದಿರುವುದೇ ಎಲ್ಲಾ ಸಮಸ್ಯೆಗಳ ಮೂಲ. ಅವರು ಆಳಿದ 31 ವರ್ಷಗಳಲ್ಲಿ ಏಕೆ ಇದು ಸಾಧ್ಯವಾಗಿಲ್ಲ ? ಈ ವರ್ಷಗಳಲ್ಲಿ ಕೊಬ್ಬಿದ್ದು ಗುತ್ತೇದಾರಿ ಬಂಡವಾಳಿಗರು ಮತ್ತು ಜಮೀನುದಾರರು. ಬಡವಾದದ್ದು ಕಾರ್ಮಿಕರು, ರೈತರು, ಕೃಷಿಕೂಲಿಕಾರರು. ತಾರತಮ್ಯ ಒಂದೇ ಸಮನೆ ಹೆಚ್ಚುತ್ತಾ ಬಂದಿದೆ. ದಾರಿದ್ರ್ಯರೇಖೆಯ ಕೆಳಗೆ ಜೀವಿಸುವವರ ಸಂಖ್ಯೆ ಸದ್ಯಕ್ಕೆ ಅವರದೇ ಅಂಕೆಸಂಖ್ಯೆಗಳ ಪ್ರಕಾರ ಶೇಕಡಾ 62.

ವಾಗ್ದಾನಗಳ ಭಂಗ

ಇದು ಅವರ ಸಾಧನೆ. ಎಲ್ಲಾ ವಾಗ್ದಾನಗಳನ್ನು ಭಂಗಗೊಳಿಸಿದ್ದಾರೆ. ಈಗ ಕ್ರೂರವಾದ ಕ್ರಮಗಳಿಂದ ಆಳುವುದೊಂದೇ ಅವರಿಗುಳಿದಿರುವ ಮಾರ್ಗ.

ಇಂದು ಬೆಳಿಗ್ಗೆ ಮಹಾರಾಷ್ಟ್ರದಲ್ಲಿನ ದಮನದ ಬಗ್ಗೆ ನಾವೆಲ್ಲಾ ಚರ್ಚಿಸಿದೆವು. ಅವರು ಈ ಶಾಸನದಲ್ಲಿಯೇ ಇದರ ಬಗ್ಗೆ ಎತ್ತಿದ್ದಾರೆ. ಶಾಸನ ಕಳ್ಳಸಂತೆಕೋರರು, ಕಳ್ಳಸಾಗಾಣಿಕೆದಾರರು ಮತ್ತು ಸಮಾಜ ವಿರೋಧಿ ಶಕ್ತಿಗಳು ಇಂದಿನ ಪರಿಸ್ಥಿತಿಗೆ ಕಾರಣ ಎಂದೇನು ಹೇಳಿಲ್ಲ. ಆ ನೆಪವಿದೆಯಷ್ಟೆ. ಶಾಸನ ಆರಂಭದಲ್ಲಿ ಹೇಳುವುದು "ಈಗ ಇರುವ ಕೋಮುವಾರು ವಿರಸ, ಸಾಮಾಜಿಕ ಪ್ರಕ್ಷುಬ್ಧತೆ...ಯ ಪರಿಸ್ಥಿತಿಯಲ್ಲಿ ......" ಇದರ ಅರ್ಥವೇನು ? ಗೃಹಮಂತ್ರಿಗಳು ಅವರದೇ ಮಂತ್ರಾಲಯದ 1969ರ ತೀವ್ರವಾದಿ ಆಂದೋಲನಗಳ ಬಗ್ಗೆ ವರದಿಯನ್ನು ಓದಬೇಕು. ಆಗ ಈ ವರದಿ ಎಲ್ಲಾ ಸಾಮಾಜಿಕ ಪ್ರಕ್ಷುಬ್ಧತೆಯ ಕಾರಣ, ಭೂಸುಧಾರಣೆಗಳನ್ನು ಜಾರಿಗೆ ತರುವಲ್ಲಿ ಸರ್ಕಾರದ ವಿಫಲತೆ ಎಂದಿತ್ತು. ಅವರು ಇದನ್ನು ಪುನಃ ಮರೆತಂತಿದೆ. ಆ ವರದಿಯಿಂದ ಕಲಿಯುವುದು ಬಿಟ್ಟು, ಭೂಮಿಯ ಬಗ್ಗೆ ಹೋರಾಟ ನಡೆಸುವವರ ಮೇಲೆ ದಮನ ನಡೆಸಲು ಹೊರಟಿದ್ದಾರೆ.

ಇನ್ನು ಕೈಗಾರಿಕಾ ಅಶಾಂತಿಯ ಬಗ್ಗೆ. ಕಾರ್ಮಿಕರಿಗೆ ಗೃಹಮಂತ್ರಿಗಳು ಈ ಕಾಯಿದೆಯ ಮೂಲಕ ನೀವು ಹೆಚ್ಚು ಸಂಬಳಕ್ಕೆ ಅಥವಾ ಬೇರೆ ಯಾವುದಕ್ಕೆ ಮುಷ್ಕರ ಹೂಡಿದರೆ ರೈಲ್ವೇ ಮುಷ್ಕರವನ್ನು ದಮನಿಸಿದಂತೆ ಮಾಡುತ್ತೇವೆ, ಎಂದು ಹೇಳುವಂತಿದೆ.

ಅಷ್ಟೇ ಅಲ್ಲ. 'ಬೇರೆ ಬೇರೆ ಆಸಕ್ತ ಗುಂಪುಗಳು ವಿವಿಧ ವಿಷಯಗಳ ಬಗ್ಗೆ ಚಳುವಳಿಗಳನ್ನು ಹೂಡುವ ಸಂಚುಗಳಲ್ಲಿ ತೊಡಗುವುದು ಹೆಚ್ಚು ಹೆಚ್ಚಾಗಿ ಕಂಡುಬರುತ್ತಿದೆ' ಎಂದೂ ಅವರ ಅಭಿಪ್ರಾಯ. ಚಳುವಳಿಗಳು ರಾಜಕೀಯ ಪಕ್ಷಗಳು ಸಂಚುಗಳ ಮೂಲಕ ಆರಂಭವಾಗುತ್ತವೆ ಎಂದು ಅವರು ತಿಳಿದಂತಿದೆ!

ಕಬ್ಬಿನ ಬೆಲೆಗಳ ವಿಷಯದಲ್ಲಿ ಹರಾಜು ಹಾಕುವಂತೆ 13 ರೂ., 16 ರೂ., 20 ರೂ., 23 ರೂ., ಎಂದು ಹೇಳುತ್ತಾರೆ. ಇದರ ಬಗ್ಗೆ ಪ್ರತಿಭಟಿಸಿದರೆ ಅದನ್ನು ದಮನಿಸುತ್ತೇವೆ ಎನ್ನುತ್ತಾರೆ.

ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ ಇಲ್ಲಿ ಹಲವರಿಗೆ ಅನುಭವ ಕಡಿಮೆ. ಈಗ ಆಳುವ ಜನರು 31 ವರ್ಷದಿಂದ ಅಧಿಕಾರದ ರುಚಿ ಉಂಡಿದ್ದಾರೆ. ಇವರಲ್ಲಿ ಬಹು ಕಡಿಮೆ ಜನ ಸ್ವಾತಂತ್ರ್ಯ ಚಳುವಳಿಯಲ್ಲಿ ಬಾಧಿತರಾದವರು. ಆದರೆ ನಮಗಂತೂ ಬ್ರಿಟಿಷರ ಮತ್ತು ಕಾಂಗ್ರೆಸ್ ಆಡಳಿತದಲ್ಲೂ 'ಮುನ್ನೆಚ್ಚರಿಕೆ ಸ್ಥಾನಬದ್ಧತೆ'ಯ ಪ್ರಕಾರ ಬಂಧನಕ್ಕೊಳಗಾಗಿ ಚೆನ್ನಾಗಿ ಅನುಭವವಿದೆ.

ದುರುಪಯೋಗ ಅನಿವಾರ್ಯ

'ಮುನ್ನೆಚ್ಚರಿಕೆ ಸ್ಥಾನಬದ್ಧತೆ'ಗೆ ಆನುವು ಮಾಡಿಕೊಡುವ ಈ ಕಾಯಿದೆಯ ದುರುಪಯೋಗವಾಗದಂತೆ ಹಲವು ರಕ್ಷಣೆಗಳಿವೆ ಎನ್ನುತ್ತಾರೆ. ನಾನು ಹಲವು ಸಾರಿ ಬಾಧಿತನಾಗಿದ್ದೇನೆ. ನಾಲ್ಕು ಬಾರಿ ಈ 'ಮುನ್ನೆಚ್ಚರಿಕೆಯ ಸ್ಥಾನ ಬದ್ಧತೆ' ಪ್ರಕಾರ ಯಾವುದೇ ವಿಚಾರಣೆ ಇಲ್ಲದೆ. ಒಂದು ಮಧ್ಯರಾತ್ರಿಯಲ್ಲಿ ಸೈಕ್ಲೋಸ್ಟೈಲ್ ಮಾಡಿದ ಪ್ರತಿಗಳನ್ನು ದೇಶದಾದ್ಯಂತ ಹಂಚಲಾಗುತ್ತದೆ. ಆ ಪಟ್ಟಿಯಲ್ಲಿದ್ದ ವಲ್ಲರನ್ನೂ ಬಂಧಿಸಲು ಆಜ್ಞೆಯಾಗುತ್ತದೆ. ಎರಡು ಮೂರು ಪಟ್ಟಿಗಳು ಸಿದ್ಧವಾಗುತ್ತವೆ. ಸರದಿಯಂತೆ ಇದರ ಪ್ರಕಾರ ಕೆಲಸ ನಡೆಯುತ್ತದೆ. ಈ ಪಟ್ಟಿಗಳು ಈಗಾಗಲೇ ಗೃಹಖಾತೆಯಲ್ಲಿ ತಯಾರಾಗಿವೆ.

ಸರ್ದಾರ ಪಟೇಲ್ ಹಿಂದೊಂದು ಬಾರಿ ಹೇಳಿದ್ದರು 'ನಾನು ಮುನ್ನೆಚ್ಚರಿಕೆ ಸ್ಥಾನಬದ್ಧತೆ ಕಾಯಿದೆ ತರುತ್ತಿರುವುದು ಕಮ್ಯುನಿಸ್ಟರನ್ನು ಬಗ್ಗುಬಡಿಯಲು' ಅವರಿಗೆ ಇದನ್ನು ಮುಚ್ಚುಮರೆಯಿಲ್ಲದೆ ಹೇಳುವ ಧೈರ್ಯವಿತ್ತು. ಈಗಿನ ಆಳುವವರಿಗೆ ಆ ಧೈರ್ಯವೂ ಇಲ್ಲ. ಈಗ ಅವರು ಸಮಾಜ ವಿರೋಧಿಗಳ ನಿಯಂತ್ರಣಕ್ಕಾಗಿ ತರುತ್ತಿದ್ದೇವೆ ಇತ್ಯಾದಿ ಸುತ್ತಿ ಬಳಸಿ ಹೇಳುತ್ತಾರೆ.

ಹಲವು ಬಾರಿ ಈ ರೀತಿ ಕಾಯಿದೆಗಳು ಬಂದಿವೆ. ಎಷ್ಟು ಜನ ಸಮಾಜ ವಿರೋಧಿಗಳನ್ನು ಇದರಿಂದ ಬಂಧಿಸಲಾಗಿದೆ? ನನ್ನ ಎ.ಐ.ಎ.ಡಿ.ಎಂ.ಕೆ. ಮಿತ್ರರಿಗೆ ಇದರ ರುಚಿ ಗೊತ್ತಿಲ್ಲ ಬಹುಶಃ ನಾನು ಇಂದಿನ ಗೃಹ ಮಂತ್ರಿಗಳು ಪಂಜಾಬಿನ ಮುಖ್ಯಮಂತ್ರಿಯಾಗಿದ್ದಾಗ ಒಬ್ಬ ರಾಜಕೀಯ ಸಂತ್ರಸ್ತನ ಬಗ್ಗೆ ಪತ್ರ ಬರೆದಿದ್ದೆ. ಅವನು ರಾಜಕೀಯ ಕಾರಣಗಳಿಗಾಗಿ ಜೈಲಿಗೆ ಹೋಗಿ ಬಂದಿದ್ದು, ಅವನ ಹೆಸರು ಇನ್ನೂ ಪೋಲೀಸರ ಕೆಟ್ಟ ವ್ಯಕ್ತಿಗಳ ಪಟ್ಟಿಯಲ್ಲಿದೆ. ಇದರಿಂದ ಅವನ ಜೀವನೋಪಾಯಕ್ಕೆ ಅಡ್ಡಿಯಾಗಿದೆ. ಇದನ್ನೇ ಎಲ್ಲಾ ರಾಜಕೀಯ ಕಾರ್ಯಕರ್ತರಿಗೆ ಮಾಡಲು ಈ ಕಾಯಿದೆ ಹವಣಿಕೆ ಹಾಕುತ್ತಿದೆ. ಇದನ್ನು ಈಗಲೇ ಬೇರೆ ರೀತಿಯಲ್ಲಿ ಮಾಡಲಾಗುತ್ತಿದೆ.

ಸಮಾಜ ವಿರೋಧಿಗಳು ಸೊಂಪಾಗಿದ್ದಾರೆ

1947ರ ಕೋಮುವಾರು ದಂಗೆಗಳಲ್ಲಿ ಹಲವು ಕಾಂಗ್ರೆಸಿಗರಿಗೂ ಬಿಸಿ ತಟ್ಟಿತ್ತು. ಆಗಿನಿಂದ ಈಗಿನವರಿಗೂ ಕೋಮುವಾರು ಸೌಹಾರ್ದತೆ, ಅಲ್ಪಸಂಖ್ಯಾತರ ಹಕ್ಕು ರಕ್ಷಣೆಯ ಬಗ್ಗೆ ನಾವು ಮಾತ್ರವೇ ಎಡೆಬಿಡದೆ ಹೋರಾಟ ಮಾಡುತ್ತಿದ್ದೇವೆ. ಆದರೆ ಅದೇ ನಮ್ಮ ಪಕ್ಷದ ಕಾಮ್ರೇಡ್ ಒಬ್ಬರನ್ನು, ಮೊರಾದಾಬಾದಿನ ಕಾಂ. ಅರ್ಶದ್ ಪರವೇಜ್, ಬಹುಶಃ ಇದಕ್ಕಾಗಿ ಬಂಧಿಸಲಾಗಿದೆ! ಅವರ ಮನೆ ಜಪ್ತಿ ಮಾಡಲಾಯಿತು. ಅವರ ತಂದೆ ತಾಯಿಗಳ, ಸೋದರ, ಸೋದರಿಯರ ಬಟ್ಟೆ, ಬರೆಗಳು, ಆಸ್ತಿಪಾಸ್ತಿಗಳನ್ನು ವಶಪಡಿಸಿಕೊಳ್ಳಲಾಗಿದೆ. ಸುಪ್ರೀಂ ಕೋರ್ಟು ಮಧ್ಯ ಪ್ರವೇಶದಿಂದ ಮಾತ್ರ ಇದನ್ನು ತಡೆಯುವುದು ಸಾಧ್ಯವಾಯಿತು. ಇಂತಹುದೇ ಘಟನೆಗಳು ಇನ್ನೂ ನಡೆಯುತ್ತವೆ. ಆದರೆ ಎಷ್ಟು ಸಮಾಜ ವಿರೋಧಿಗಳನ್ನು ಈ ಕಾಯಿದೆ ಪ್ರಕಾರ ಬಂಧಿಸಲಾಗಿದೆ ಎಂದು ಗೃಹ ಮಂತ್ರಿಗಳು ಅಂಕೆಸಂಖ್ಯೆಕೊಡಬಲ್ಲರೇ? ಕಳೆದ 31 ವರ್ಷಗಳಲ್ಲಿ ಕಳ್ಳಸಾಗಾಣಿಕೆದಾರರು, ಕಳ್ಳಸಂತೆಕೋರರನ್ನು ದಮನಿಸಲಾಗಿದೆಯೆ? ಇದರ ಬದಲು ಅವರು ಪೋಲೀಸು, ನೌಕರಶಾಹಿಯ ಜತೆ ಶಾಮೀಲಾಗಿ, ಆಳುವ ಪಕ್ಷದ ಕೃಪಾಕಟಾಕ್ಷದಲ್ಲೇ ಸೊಂಪಾಗಿ ಬೆಳೆಯುತ್ತಿದ್ದಾರೆ. ಅವರು ರಾಜಕೀಯದ ಮೇಲೆ ಪ್ರಭಾವ ಬೀರುವಷ್ಟು ಪ್ರಬಲರಾಗಿದ್ದಾರೆ. ಅವರನ್ನು ದಮನ ಮಾಡುವ ಧೈರ್ಯ, ಉದ್ದೇಶ ಯಾರಿಗೂ ಇಲ್ಲ. ಇದು ಎಲ್ಲಾ ರಾಜ್ಯಗಳಲ್ಲೂ ಇರುವ ಪರಿಸ್ಥಿತಿ.

ಆದರೂ ಅವರು ಸಮಾಜ ವಿರೋಧಿಗಳ ನಿಯಂತ್ರಣದ ಬಗ್ಗೆ ಮಾತನಾಡುತ್ತಾರೆ. ಕಾಂಗ್ರೆಸ್(ಐ) ಆಡಳಿತದಲ್ಲಿ ನಡೆಯುತ್ತಿರುವುದು ಕಳ್ಳ ಭಟ್ಟಿ, ಹರಿಜನರ ಮೇಲೆ ಅತ್ಯಾಚಾರ, ಬಿಹಾರದಲ್ಲಿ ಗೇಣಿದಾರರ ಒಕ್ಕಲೆಬ್ಬಿಸುವಿಕೆ ಇತ್ಯಾದಿ.

(6ನೇ ಪುಟ ನೋಡಿ)

ದಕ್ಷಿಣ ಆಫ್ರಿಕಾದಲ್ಲಿ ವಸಾಹತುಶಾಹಿ ಮತ್ತು ಸಾಮ್ರಾಜ್ಯಶಾಹಿ

ಆಫ್ರಿಕಾ ಖಂಡದ ದಕ್ಷಿಣ ಭಾಗದಲ್ಲಿರುವ ಕೇಪ್, ನಾಟಾಲ್, ಆರೆಂಜ್ ಫ್ರೀ ಸ್ಟೇಟ್ ಹಾಗೂ ಟ್ರಾನ್ಸ್‌ವಾಲ್ ಈ ನಾಲ್ಕು ಪ್ರದೇಶಗಳು ಸೇರಿ 1910ರಲ್ಲಿ ಈಗ ದಕ್ಷಿಣ ಆಫ್ರಿಕಾ ಎನಿಸಿಕೊಳ್ಳುವ ದೇಶ ಅಸ್ತಿತ್ವಕ್ಕೆ ಬಂದಿತು. ಈ ನಾಲ್ಕು ಪ್ರದೇಶಗಳಲ್ಲಿ ಕೇಪ್ ಹಾಗೂ ನಾಟಾಲ್ ಆಗ ಬ್ರಿಟಿಷ್ ವಲಸೆಗಾರರ ಹತೋಟಿಯಲ್ಲಿದ್ದರೆ ಉಳಿದೆರಡು ಬೋಅರ್ ಜನಾಂಗದವರ ಹತೋಟಿಯಲ್ಲಿತ್ತು. ಬೋಅರರೆಂದರೆ ದಕ್ಷಿಣ ಆಫ್ರಿಕಾದಲ್ಲಿ ಮೊಟ್ಟಮೊದಲು ಕಾಲಿಟ್ಟ ಡಚ್ ವಲಸೆಗಾರರ ವಂಶಜರು. ಬ್ರಿಟಿಷ್ ಹಾಗೂ ಬೋಅರ್ ಈ ಎರಡು ಬಿಳಿಯ ಜನಾಂಗಗಳ ನಡುವಿನ ಒಪ್ಪಂದದ ರೂಪವಾಗಿ ಅಸ್ತಿತ್ವಕ್ಕೆ ಬಂದ ಈ ದೇಶ ಎರಡು ವಿಶಿಷ್ಟತೆಗಳನ್ನು ಪಡೆದಿದೆ. ಮೊದಲನೆಯದು, ಜಗತ್ತಿನ ಬೆಲೆಬಾಳುವ ಲೋಹವಾದ ಚಿನ್ನದ ಉತ್ಪಾದನೆಯಲ್ಲಿ ಮುಕ್ಕಾಲು ಪಾಲನ್ನು ಈ ದೇಶವೇ ಒದಗಿಸುತ್ತದೆ. ಇದೇ ರೀತಿ ಪ್ಲೇಟಿನಂ ಹಾಗೂ ವಜ್ರದ ಉತ್ಪಾದನೆಯಲ್ಲೂ ಇದರದು ಸಿಂಹಪಾಲು. ಎರಡನೆಯ ವಿಶಿಷ್ಟತೆಯೆಂದರೆ ವಲಸೆಗಾರರಾಗಿ ಬಂದ ಬಿಳಿಯ ಅಲ್ಪಸಂಖ್ಯಾತರು ಈ ಪ್ರದೇಶದ ಮೂಲನಿವಾಸಿಗಳಾದ ಬಹುಸಂಖ್ಯಾತ ಕರಿಯರನ್ನು ಹಾಗೂ ಇತರ ವರ್ಣೀಯರನ್ನು ಖಾಯಂ ಆಗಿ ತಮ್ಮ ಅಧೀನದಲ್ಲೇ ಇಟ್ಟುಕೊಳ್ಳಲು ರೂಪಿಸಿಕೊಂಡ ಅಪಾರ್ಟ್‌ಹೈಡ್ (apartheid) ಇಲ್ಲಿಯ ಸರಕಾರದ ಅಧಿಕೃತ ನೀತಿ.

ಅಪಾರ್ಟ್‌ಹೈಡ್ ಎಂದರೆ 'ಪ್ರತ್ಯೇಕ ಅಭಿವೃದ್ಧಿ' ಎಂದರ್ಥ. ಅಂದರೆ ದಕ್ಷಿಣ ಆಫ್ರಿಕಾದ ಜನಸಂಖ್ಯೆಯಲ್ಲಿ ಕರಿಯರನ್ನು ಹಾಗೂ ಬಿಳಿಯರನ್ನು ಪ್ರತ್ಯೇಕಿಸಿ ಕೇವಲ 20% ದಷ್ಟೂ ಇಲ್ಲದ ಬಿಳಿಯ ವಲಸೆಗಾರರು ಬಹುಸಂಖ್ಯಾತ ಮೂಲನಿವಾಸಿಗಳನ್ನು ಎರಡನೇ ದರ್ಜೆಯ ನಾಗರಿಕರನ್ನಾಗಿಸುವ ವರ್ಣಭೇದ. ಜನಾಂಗ ಭೇದ ನೀತಿಯದು. ಈ ನೀತಿಯಂತೆ ಜೀವನದ ಎಲ್ಲಾ ರಂಗಗಳಲ್ಲಿ (ವಿದ್ಯಾಭ್ಯಾಸ, ಉದ್ಯೋಗ, ಸಾಮಾಜಿಕ ಸ್ಥಾನಮಾನ ಇತ್ಯಾದಿ) ತಾರತಮ್ಯದ ಧೋರಣೆ ಅನುಸರಿಸಲಾಗುತ್ತಿದೆ.

ಬಿಳಿಯ ವಲಸೆಗಾರರು ದಕ್ಷಿಣ ಆಫ್ರಿಕಾವನ್ನು ತಮ್ಮ 'ಗಣರಾಜ್ಯ'ವೆಂದು ಹೇಳಿಕೊಳ್ಳುತ್ತಾರೆ. ಆದರೆ ಈ 'ಗಣರಾಜ್ಯ'ದಲ್ಲಿ ಮತಾಧಿಕಾರವಿರುವುದು 18% ದಷ್ಟಿರುವ ಬಿಳಿಯ ಜನಾಂಗಗಳವರಿಗೆ ಮಾತ್ರ. ಉಳಿದವರು ಅಂದರೆ ಕರಿಯರು, ಭಾರತೀಯ ಸಂತತಿಯವರು ಹಾಗೂ ಮಿಶ್ರ ಜನಾಂಗದವರು. ಬಿಳಿಯರ ಜೀವನಾವಶ್ಯಕತೆಗಳನ್ನು ಪೂರೈಸಲು ಹಾಗೂ ದೇಶದ ಸಂಪತ್ತನ್ನು ಹೆಚ್ಚಿಸಲು ತೋಟಗಳಲ್ಲಿ, ಚಿನ್ನದ ಗಣಿಗಳಲ್ಲಿ ಹಾಗೂ ಕೈಗಾರಿಕೋದ್ಯಮಗಳಲ್ಲಿ ದುಡಿಯಲಿಕ್ಕಾಗಿಯೇ ಇರುವ ಯಂತ್ರ ಸಮಾನ ಜೀವಿಗಳು. ಕೆಲವು ಅಂಕಿಸಂಖ್ಯೆಗಳನ್ನು ಗಮನಿಸಬಹುದು.

ಬಿಳಿಯ ವಲಸೆಗಾರರ ದಬ್ಬಾಳಿಕೆ

ಸುಮಾರು 18% ಇರುವ ಬಿಳಿಯರು ದೇಶದ 87% ಜಮೀನಿನ ಮೇಲೆ ಒಡೆತನ ಸ್ಥಾಪಿಸಿದ್ದಾರೆ. ಉಳಿದ 13% ಜಮೀನನ್ನು ಕರಿಯರಿಗಾಗಿ "ಮೀಸಲು" ಇಡಲಾಗಿದೆ. ಈ 13% ಹೆಚ್ಚೇನು ಉಪಯೋಗಕ್ಕೆ ಬಾರದ ಜಮೀನು ಎಂದು ಬೇರೆ ಹೇಳಬೇಕಾಗಿಲ್ಲ.

ದೇಶದ ಅರ್ಧದಷ್ಟು ಕರಿಯರು ಹಾಗೂ ಇತರ ವರ್ಣೀಯರು ಬಿಳಿಯರ ಫಾರ್ಮ್‌ಗಳಲ್ಲಿ, ಗಣಿಗಳಲ್ಲಿ, ಕೈಗಾರಿಕೆಗಳಲ್ಲಿ ದುಡಿಯುತ್ತಿದ್ದಾರೆ. ಉಳಿದರ್ಧ ಜನ ಈ 13% ಬಂಜರು ಭೂಮಿಯಲ್ಲಿ ಯಾವ ಜೀವನಾದಾರವೂ ಇಲ್ಲದೆ ಹೇಗೋ ಜೀವನ ಸಾಗಿಸುತ್ತಿದ್ದಾರೆ. ಫಾರ್ಮ್, ಗಣಿ, ಕೈಗಾರಿಕೆಗಳಲ್ಲಿ ತಮ್ಮ ಕೆಲಸದ ಕರಾರಿನ ಅವಧಿ ಮುಗಿದ ಮೇಲೆ ಬಿಳಿಯರ ಕ್ಷೇತ್ರಗಳಲ್ಲಿರುವ ಕರಿಯರಿಗೂ ಅಲ್ಲಿರುವ ಹಕ್ಕು ಇರುವುದಿಲ್ಲ. ಅವರೂ "ಮೀಸಲು" ಕ್ಷೇತ್ರಗಳಿಗೆ ವಾಪಾಸಾಗಬೇಕು.

ಈ 18% ಬಿಳಿಯರು ದೇಶದ ಆದಾಯದ 70% ದಷ್ಟನ್ನು ಅನುಭೋಗಿಸುತ್ತಿದ್ದಾರೆ.

ಶಿಕ್ಷಣಕ್ಕಾಗಿ ಈ 'ಗಣರಾಜ್ಯದ ಸರಕಾರ ಖರ್ಚು ಮಾಡುವ ವಿವರ ಹೇಗಿದೆ :

ಬಿಳಿಯ ಜನಾಂಗದ ಪ್ರತಿ ವಿದ್ಯಾರ್ಥಿಗೆ	654-00 ರ್ಯಾಂಡ್
ವರ್ಣೀಯ ಮಿಶ್ರ ಜನಾಂಗದ ಪ್ರತಿ ವಿದ್ಯಾರ್ಥಿಗೆ	217-00 ರ್ಯಾಂಡ್
ಭಾರತೀಯ ಮೂಲದ ಪ್ರತಿ ವಿದ್ಯಾರ್ಥಿಗೆ	157-59 ರ್ಯಾಂಡ್
ಆಫ್ರಿಕನ್ ಜನಾಂಗದ ಪ್ರತಿ ವಿದ್ಯಾರ್ಥಿಗೆ	48-55 ರ್ಯಾಂಡ್

(ರ್ಯಾಂಡ್ ದಕ್ಷಿಣ ಆಫ್ರಿಕಾದ ನಾಣ್ಯ)

ಅಂದರೆ ಬಹುಸಂಖ್ಯಾತ ಕರಿಯ ಜನಾಂಗದ ವಿದ್ಯಾರ್ಥಿಗಿಂತ ಬಿಳಿಯ ವಿದ್ಯಾರ್ಥಿಗೆ 13 ಪಟ್ಟಿಗಿಂತಲೂ ಹೆಚ್ಚು ಖರ್ಚು ಮಾಡಲಾಗುತ್ತಿದೆ. ನಿಜವಾಗಿ ಕರಿಯರಿಗೆ ದೊರೆಯುವ ಶಿಕ್ಷಣ ಬಿಳಿಯರಿಗಿಂತ ತೀರಾ ಭಿನ್ನವಾಗಿದೆ; ಅದು ಕರಿಯರು ಯಾವಾಗಲೂ ಬಿಳಿಯರ ಅಧೀನರಾಗಿ ಮಾತ್ರ ಜೀವಿಸಿರಲು ಅವಕಾಶವಾಗುವಂತಹದು. ಉದಾಹರಣೆಗೆ ದಕ್ಷಿಣ ಆಫ್ರಿಕಾದ ಇಂಜಿನಿಯರುಗಳಲ್ಲಿ 14890 ಜನ ಬಿಳಿಯರು; ಕೇವಲ 80 ಮಂದಿ ಕರಿಯರು. ಕಾರ್ಮಿಕರ ವೇತನಗಳಲ್ಲಿ ಇದೇ ರೀತಿಯ ಜನಾಂಗ ತಾರತಮ್ಯವಿದೆ. "ಗಣಿ ಕ್ಷೇತ್ರಗಳಲ್ಲಿ ವಾಸಿಸುವ ಆಫ್ರಿಕನ್ ಗಣಿ ಕಾರ್ಮಿಕರ ಆಹಾರಾಂಶವನ್ನು ನಿರ್ಧರಿಸುವಾಗ 'ಅತೀ ಹೆಚ್ಚು ಕೆಲಸವನ್ನು ಮಾಡಿಸಲು ಬೇಕಾಗುವ ಅತೀ ಕಮ್ಮಿ ಆಹಾರ' ಎಂಬ ನೀತಿಯನ್ನವಲಂಬಿಸಬೇಕು" ಎಂದು 1910ರಲ್ಲಿ ಗಣಿ ಮಾಲೀಕರು ಹೇಳುತ್ತಿದ್ದರಂತೆ. ದಕ್ಷಿಣ ಆಫ್ರಿಕಾದಲ್ಲಿ ಈಗಲೂ ಇದೇ ನೀತಿ ಜಾರಿಯಲ್ಲಿರುವಂತೆ ಕಾಣುತ್ತದೆ. "ಬಿಳಿಯರ ಸಮಾಜದೊಳಗೆ ಕರಿಯರು ಕೇವಲ ಒಂದು ಸರಕನ್ನು, ಶ್ರಮಶಕ್ತಿಯೆಂಬ ಸರಕನ್ನು ಸರಬರಾಜು ಮಾಡುವವರು ಮಾತ್ರ. ನಾವು ಬಿಳಿಯರ ಕ್ಷೇತ್ರಕ್ಕೆ ಆಮದು ಕೊಳ್ಳುವುದು ಕರಿಯ ಕಾರ್ಮಿಕರನ್ನಲ್ಲ; ಅವರ ಶ್ರಮಶಕ್ತಿಯನ್ನು ಮಾತ್ರ" ಎಂದು ದಕ್ಷಿಣ ಆಫ್ರಿಕಾದ ಒಬ್ಬ ಬಿಳಿಯ ಎಂ. ಪಿ. ಹೇಳಿದ್ದಾನೆ. ಇದು ವರ್ಣದ್ವೇಷ ನೀತಿಯ ಉದ್ದೇಶವನ್ನೂ, ಅಮಾನುಷತೆಯನ್ನೂ ತೋರಿಸುತ್ತದೆ.

ಶೋಷಣೆ ಅನ್ಯಾಯ ಮತ್ತು ತಾರತಮ್ಯವಿಲ್ಲದ ಹೊಸ ಸಮಾಜದ ನಿರ್ಮಾಣಕ್ಕಾಗಿ ಹೋರಾಡುತ್ತಿರುವ ಮಾರ್ಕ್ಸ್‌ವಾದಿಗಳು ಜಗತ್ತಿನ ಯಾವುದೇ ಪ್ರದೇಶದಲ್ಲಿ ಅನ್ಯಾಯ, ಶೋಷಣೆ ಹೇಗೆ ಮತ್ತು ಯಾಕೆ ನಡೆಯುತ್ತಿದೆ, ಶೋಷಣೆಗೊಳಗಾದವರು ಅದನ್ನು ಯಾವ ರೀತಿ ಪ್ರತಿಭಟಿಸುತ್ತಿದ್ದಾರೆ. ಅವರ ಹೋರಾಟಗಳ ಸ್ವರೂಪವೇನು ಇತ್ಯಾದಿಗಳ ಬಗ್ಗೆ ವೈಜ್ಞಾನಿಕ ಅರಿವನ್ನು ಗಳಿಸಿಕೊಳ್ಳುವುದಗತ್ಯ. ಈ ದೃಷ್ಟಿಯಿಂದ ದಕ್ಷಿಣ ಆಫ್ರಿಕಾದ ಇತಿಹಾಸವನ್ನು ಹಾಗೂ ಅಲ್ಲಿನ ಸದ್ಯದ ಪರಿಸ್ಥಿತಿಯನ್ನು ಸಂಕ್ಷೇಪವಾಗಿ ತಿಳಿಸುವುದು ಈ ಲೇಖನದ ಉದ್ದೇಶ.

ಶೂನ್ಯದಿಂದ ಏನೂ ಹುಟ್ಟುವುದಿಲ್ಲ

ಜಗತ್ತಿನ ಬೇರೆ ಬೇರೆ ಸಮಾಜಗಳಲ್ಲಿ ನಾವು ಕಾಣುವ ವರ್ಣಭೇದ, ಜಾತಿಭೇದ, ವರ್ಗಭೇದ ಇವೆಲ್ಲ ಪರಸ್ಪರ ಸಂಬಂಧವಿಲ್ಲದವುಗಳು, ಒಂದು ಸಮಾಜದ ಚರಿತ್ರೆಯನ್ನು ತಿಳಿಯುವುದರಿಂದ ಆ ದೇಶದ ಭವಿಷ್ಯವನ್ನು ರೂಪಿಸಲು ಸಾಧ್ಯವಿಲ್ಲ. ಪ್ರತಿ ಸಮಾಜದ ಭವಿಷ್ಯ ಮನುಷ್ಯರ ಹತೋಟಿಗೆ ಮೀರಿದ ಅದೃಷ್ಟದ ಕೈಯಲ್ಲಿದೆ ಎಂದು ಕೆಲವರು ಹೇಳುತ್ತಾರೆ. ಆದರೆ ಮಾರ್ಕ್ಸ್‌ವಾದಿಗಳು ಇದನ್ನು ಒಪ್ಪುವುದಿಲ್ಲ. ಶೂನ್ಯದಿಂದ ಏನೂ ಹುಟ್ಟುವುದಿಲ್ಲ. ಪ್ರತಿಯೊಂದು ಸಾಮಾಜಿಕ ಕ್ರಿಯೆಯ ಹಿನ್ನೆಲೆಯಲ್ಲಿ ಅದಕ್ಕೆ ಕಾರಣಗಳನ್ನು ಹುಡುಕಬಹುದು. ಬೇರೆ ಬೇರೆ ದೇಶಗಳ ಪರಿಸ್ಥಿತಿ ವಿಭಿನ್ನವಾಗಿದ್ದರೂ ಈ ಎಲ್ಲಾ ದೇಶಗಳ ಚರಿತ್ರೆಯಲ್ಲಿ ಕೆಲವು ಸರ್ವಸಾಮಾನ್ಯ ವೈಜ್ಞಾನಿಕ ನಿಯಮಗಳನ್ನು ಗುರುತಿಸುವುದು ಸಾಧ್ಯವಿದೆ. ಹೀಗೆ ಈ ನಿಯಮಗಳನ್ನು ಗುರುತಿಸಿ, ಕಾರಣ ಮತ್ತು ಪರಿಣಾಮಗಳನ್ನು ತಿಳಿದು, ಅಳೆದು ಸರಿಯಾದ ದಿಕ್ಕಿನಲ್ಲಿ ಮುನ್ನಡೆದು ನಮ್ಮ ಭವಿಷ್ಯವನ್ನು ನಾವೇ ರೂಪಿಸುವುದು ಸಾಧ್ಯ ಎಂಬುದು ನಮ್ಮ ಅನುಭವ. "ಜಗತ್ತಿನ ಇತಿಹಾಸವೆಂದರೆ ವರ್ಗಹೋರಾಟಗಳ ಇತಿಹಾಸ" ಎಂಬ ವೈಜ್ಞಾನಿಕ ನಿಯಮವನ್ನು ಮಾರ್ಕ್ಸ್‌ವಾದಿಗಳು ಕಂಡುಕೊಂಡಿದ್ದಾರೆ. ಆದರೆ ಈ ವರ್ಗಹೋರಾಟ ಕೆಲವೊಮ್ಮೆ ಕಣ್ಣಿಗೆ ಕಾಣುವಂತೆ ನೇರವಾಗಿ ನಡೆಯಬಹುದು ಅಥವಾ ಕೆಲವೊಮ್ಮೆ ಮೇಲ್ನೋಟಕ್ಕೆ ತಿಳಿಯದ ರೀತಿಯಲ್ಲಿ ಮುಸುಕಿನಲ್ಲಿ ನಡೆಯುತ್ತಿರಬಹುದು. ದಕ್ಷಿಣ ಆಫ್ರಿಕಾದಲ್ಲಿನ ಭೇದಭಾವ ಹಾಗೂ ಹೋರಾಟ ಮೇಲ್ನೋಟಕ್ಕೆ ಬಿಳಿಯರು ಮತ್ತು ಕರಿಯರ ನಡುವಿನ ವ್ಯವಹಾರದಂತೆ ಕಂಡುಬಂದರೂ ಮೂಲತಃ ಅದೂ ವರ್ಗಸಮಾಜದಲ್ಲಿ ಶೋಷಕರು ಮತ್ತು ಶೋಷಿತರ ನಡುವೆ ನಡೆಯುತ್ತಿರುವ ಹೋರಾಟ ಎಂಬುದು ದಕ್ಷಿಣ ಆಫ್ರಿಕಾದ ಕಳೆದ ಮೂರು ಶತಮಾನಗಳ ಇತಿಹಾಸವನ್ನು ಅಧ್ಯಯನ ಮಾಡಿದರೆ ತಿಳಿಯುತ್ತದೆ. ವರ್ಣದ್ವೇಷ ನೀತಿ ಈ ಸಮಾಜದಲ್ಲಿ ಶೋಷಕರ ಮುಖ್ಯ ಅಸ್ತ್ರ.

ಬಂಡವಾಳಶಾಹಿಯ ಉದಯ ವಸಾಹತುಶಾಹಿಯ ಆರಂಭ

ದಕ್ಷಿಣ ಆಫ್ರಿಕಾವೂ ಒಂದು ವರ್ಗಸಮಾಜ. ಇಲ್ಲಿ ಅಧಿಕಾರ ಚಲಾಯಿಸುವ ವರ್ಗ ಬಂಡವಾಳಶಾಹಿಗಳದ್ದು, ಬೂರ್ಜ್ವಾಗಳದ್ದು. ಈ ವರ್ಗಸಮಾಜ ಆರಂಭವಾದದ್ದು 1652ರಲ್ಲಿ; ಆರಂಭಿಸಿದವರು ಯೂರೋಪಿನಿಂದ ಬಂಡವಾಳ ಶೇಖರಣೆಗಾಗಿ ಹೊಸ ಅವಕಾಶಗಳನ್ನು ಹುಡುಕಿಕೊಂಡು ಹೊರಟ ಯೂರೋಪಿಯನ್ ವಲಸೆಗಾರರು. ಇವರು ಬರುವುದಕ್ಕೆ ಮೊದಲು ಆಫ್ರಿಕಾ ಖಂಡದಲ್ಲಿ ತಮ್ಮ ಚಟುವಟಿಕೆಗಳನ್ನು ತಮ್ಮ ಪಾಡಿಗೆ ಸ್ವತಂತ್ರವಾಗಿ ನಡೆಸಿಕೊಂಡಿದ್ದ ಸ್ವಯಂಪೂರ್ಣವಾದ ಹಲವಾರು ಬಣಗಳಿದ್ದವು. ಆದರೆ ಅಲ್ಲಿ ವರ್ಗಸಮಾಜದ ಅಸಮಾನತೆಯಿರಲಿಲ್ಲ.

ಕಾರ್ಮಿಕರು ತಮ್ಮ ಶ್ರಮಶಕ್ತಿಯಿಂದ ಉತ್ಪಾದಿಸಿದುದರಲ್ಲಿ ಒಂದಂಶವನ್ನು ಲಪಟಾಯಿಸುವುದರ ಮೂಲಕ ಬೂರ್ಜ್ವಾವರ್ಗ ತನ್ನ ಬಂಡವಾಳವನ್ನು ಬೆಳೆಸುತ್ತಾ ಹೋಗುತ್ತದೆ. ಆದರೆ ಬಂಡವಾಳಶಾಹಿಯ ಉದಯದ ಕಾಲದಲ್ಲಿ ಇದು ಸಾಧ್ಯವಿರಲಿಲ್ಲ. ಜಗತ್ತಿನ ಮೊತ್ತಮೊದಲಿನ ಬಂಡವಾಳಶಾಹಿಗಳು ತಮ್ಮ ಬಂಡವಾಳದ ಬಹುಪಾಲನ್ನು ದರೋಡೆ, ಲೂಟಿಗಳಿಂದಲೇ ಪಡೆದರು. ನಿಜವಾದ ಉತ್ಪಾದಕರಿಂದ ಉತ್ಪಾದನಾ ಸಾಧನಗಳನ್ನು ಸಂಪೂರ್ಣವಾಗಿ ಬೇರ್ಪಡಿಸುವುದು ಬಂಡವಾಳಶಾಹೀ ಬೆಳವಣಿಗೆಯ ಮೊದಲ ಶರತ್ತು. ಮಾರ್ಕ್ಸ್ ಈ ಬಗ್ಗೆ ಹೀಗೆ ಹೇಳಿದ್ದಾರೆ :

"ವೈಯುಕ್ತಿಕವಾಗಿದ್ದ (ಅಂದರೆ ಹಲವರ ಸೊತ್ತಾಗಿದ್ದ) ಅಲ್ಲಲ್ಲಿ ಹಂಚಿ ಹೋಗಿದ್ದ ಉತ್ಪಾದನಾ ವಿಧಾನಗಳನ್ನು ಒಂದೆಡೆ (ಕೆಲವರ ಕೈಯಲ್ಲಿ) ಸಾಂದ್ರೀಕರಿಸಿದ ಸಾಮಾಜಿಕ ಉತ್ಪಾದನಾ ವಿಧಾನವನ್ನಾಗಿ ಮಾರ್ಪಡಿಸುವುದು, ಹಲವರ ಸಣ್ಣ ಸಣ್ಣ ಆಸ್ತಿಗಳನ್ನು ಕೆಲವರ ದೊಡ್ಡ ಆಸ್ತಿಯನ್ನಾಗಿ ಮಾರ್ಪಡಿಸುವುದು, ಜನಸಾಮಾನ್ಯರಿಂದ ಅವರ ಜೀವನಾಧಾರವಾದ ಜಮೀನನ್ನು, ಹೊಟ್ಟೆಹೊರೆಯುವ ಉತ್ಪಾದನಾ ಸಾಧನಗಳನ್ನು ದುಡಿಮೆಯ ಸಾಧನಗಳನ್ನು ಕಿತ್ತುಕೊಳ್ಳುವುದು. ಜನಸಮೂಹದ ಈ ರೀತಿಯ ಭಯಂಕರವಾದ, ಯಾತನಾಮಯವಾದ ಶೋಷಣೆಯೇ ಬಂಡವಾಳಶಾಹೀ ಚರಿತ್ರೆಯ ಪೀಠಿಕೆಯಾಗಿತ್ತು. ಈ ಶೋಷಣೆಯನ್ನು ನಿರ್ದಯ ದರೋಡೆಯಿಂದ, ಅತಿ ಹೇಯ, ಅತಿ ನೀಚ, ಅತಿ ಕ್ಷುದ್ರ ಹಾಗೂ ಜಿಗುಪ್ಸೆ ಹುಟ್ಟಿಸುವ ವಿಧಾನಗಳಿಂದ ಸಾಧಿಸಲಾಯಿತು."

ಯೂರೋಪಿನ ಬೇರೆ ಬೇರೆ ದೇಶಗಳಲ್ಲಿ ಈ ರೀತಿ ಬಂಡವಾಳ ಶೇಖರಣೆ ಆರಂಭವಾಗಿ ಕ್ರಮೇಣ ಅವಕಾಶಗಳು ಕಡಿಮೆಯಾಗಲಾರಂಭಿಸಿದವು. ಅಲ್ಲದೆ ಬಂಡವಾಳಶಾಹೀ ಶೋಷಣೆಯಿಂದಾಗಿ ತಮ್ಮ ಜೀವನಾಧಾರ ಉತ್ಪಾದನಾ ಸಾಧನಗಳಿಂದ ವಂಚಿತರಾದ ಜನಸಾಮಾನ್ಯರಲ್ಲಿ ಕೆಲವರು ಹೊಸ, ಉದ್ಯೋಗಾವಕಾಶಗಳನ್ನು ಹುಡುಕಿಕೊಂಡು ಹೊರಟರು. ಹೀಗೆ ಪೂರ್ವದ ದೇಶಗಳೊಡನೆ ಲಾಭಕರವಾದ ವ್ಯಾಪಾರದ ಹೊಸ ಅವಕಾಶಗಳನ್ನು, ಹೊಸ ಉದ್ಯೋಗಾವಕಾಶಗಳಿಗಾಗಿ ಹೊರಟ ವಲಸೆಗಾರರಿಂದ

ವಸಾಹತುಶಾಹಿ ಆರಂಭವಾಯಿತು. ಅವರು ವಲಸೆ ಹೋದ ದೇಶಗಳು ಶೋಷಣೆಯ ಹೊಸ ನೆಲೆಗಳಾದವು. ಯುರೋಪಿನ ಅತೀ ಹೊಲಸಾದ ವಾತಾವರಣದಲ್ಲಿ ಬೆಳೆದ ಈ ವಲಸೆಗಾರರು ತಾವು ಹೋದ ದೇಶಗಳಲ್ಲಿ ಅದೇ ಹೊಲಸು ವಿಧಾನಗಳನ್ನು ಅನುಸರಿಸಿದರು.

ದಕ್ಷಿಣ ಆಫ್ರಿಕಾದಲ್ಲಿ

ಈಗಿನ ದಕ್ಷಿಣ ಆಫ್ರಿಕಾದ ಕೇಪ್‌ನಲ್ಲಿ ಮೊತ್ತಮೊದಲು ಕಾಲಿಟ್ಟ ಯುರೋಪಿಯನ್ನರೆಂದರೆ ಡಚ್ ಈಸ್ಟ್ ಇಂಡಿಯಾ ಕಂಪೆನಿಯ ಡಚ್ಚರು. ಈ ಕಂಪೆನಿ ಪೂರ್ವದ ದೇಶಗಳೊಂದಿಗೆ ನಡೆಸುತ್ತಿದ್ದ ಲಾಭದಾಯಕ ವ್ಯಾಪಾರದ ಮಾರ್ಗದಲ್ಲಿ ಆಫ್ರಿಕಾ ಖಂಡದ ದಕ್ಷಿಣ ತುದಿಯಲ್ಲಿರುವ ಈ ಭೂಶಿರದಲ್ಲಿ ತಮ್ಮ ನಾವಿಕರಿಗೆ ಫಲಹಾರ ಕೇಂದ್ರವನ್ನು 1652 ರಲ್ಲಿ ಸ್ಥಾಪಿಸಿತು. ಇದೇ ದಕ್ಷಿಣ ಆಫ್ರಿಕಾದ ಸಮಾಜದಲ್ಲಿ ವರ್ಗವಿಭಜನೆಗೆ ನಾಂದಿಯಾಯಿತು.

ಹೀಗೆ ಬಂದು ನೆಲೆಯೂರಿದ ಡಚ್ಚರು ಮೊದಮೊದಲು ಸ್ಥಳೀಯ ಮೂಲನಿವಾಸಿಗಳೊಂದಿಗೆ ವಿನಿಮಯದ ಮೂಲಕ ಆಹಾರಧಾನ್ಯಗಳನ್ನು ಹಾಗೂ ಇತರ ಆಹಾರ ವಸ್ತುಗಳನ್ನು ಪಡೆಯುತ್ತಿದ್ದರು. ಕ್ರಮೇಣ ಆಹಾರದ ಪೂರೈಕೆ ಹಾಗೂ ಲಾಭದಾಸೆ ಹೆಚ್ಚುತ್ತಾ ಹೋದಂತೆ ಜಮೀನು ಪಡಕೊಳ್ಳುವುದು, ಜಮೀನಿನಲ್ಲಿ ದುಡಿಯುವವ ಪಡೆಯುವುದು ಅವರಿಗೆ ದೊಡ್ಡ ಸಮಸ್ಯೆಯಾಯಿತು. ಈ ಸಮಸ್ಯೆಯನ್ನು ಪರಿಹರಿಸಲು ಅವರು ಅನುಸರಿಸಿದ ಮಾರ್ಗವೆಂದರೆ ಮೋಸ ವಂಚನೆ ಹಾಗೂ ಹಗಲು ದರೋಡೆ. ಸುಲಭದಲ್ಲಿ ಅಗ್ಗವಾದ ದುಡಿಮೆಯನ್ನು ಪಡೆಯಲು, ತಕ್ಷಣದ ಲಾಭವನ್ನೂ ಭಾರೀ ಆಸ್ತಿಯನ್ನೂ ಪಡೆಯಲು ಈ ವಸಾಹತುಗಾರರು ಸ್ಥಳೀಯ ಸ್ವಯಂಪೂರ್ಣ ಆರ್ಥಿಕ ವ್ಯವಸ್ಥೆಯನ್ನು ಸಂಪೂರ್ಣ ನಾಶಗೊಳಿಸಿದರು. ಅದರ ಸ್ಥಾನದಲ್ಲಿ ಖಾಸಗೀ ಒಡೆತನದ ನಗದು ಆರ್ಥಿಕ ವ್ಯವಸ್ಥೆಯನ್ನು ಜಾರಿಗೆ ತಂದರು. ಈ ವ್ಯವಸ್ಥೆಯಲ್ಲಿ ಗುಲಾಮ ಪದ್ಧತಿಯ ಮೇಲೆ ನಿಂತಿತು. ಈ ರೀತಿ ಸಾಮಾಜಿಕ ಹಾಗೂ ಆರ್ಥಿಕ ವಿಭಜನೆ ಕರಿಯರು ಹಾಗೂ ಬಿಳಿಯರು ಎಂಬ ಭೇದವನ್ನೇ ಆಧರಿಸಿತ್ತು. ಇಲ್ಲಿಂದಲೇ ವರ್ಣದ್ವೇಷ ನೀತಿಯ ಆರಂಭವಾಯಿತು. ಈ ರೀತಿ ವರ್ಗ ಸಮಾಜದ ಆರಂಭದೊಂದಿಗೇ ದಕ್ಷಿಣ ಆಫ್ರಿಕಾದಲ್ಲಿ ವರ್ಣದ್ವೇಷ ಹಾಗೂ ಜನಾಂಗದ್ವೇಷ ನೀತಿ ಆರಂಭವಾಯಿತು. ಮುಂದೆ ಶೋಷಣೆ ಸಾಮ್ರಾಜ್ಯಶಾಹಿ, ಬಂಡವಾಳಶಾಹಿ ಹಾಗೂ ಗುತ್ತೇದಾರಿ ಬಂಡವಾಳಶಾಹಿಯ ಹಂತಗಳನ್ನು ತಲುಪಿದಾಗ ಈ ವರ್ಣಭೇದ ನೀತಿ ಮತ್ತಷ್ಟು ಅಮಾನುಷವಾದ, ಅಸಹ್ಯವಾದ ರೂಪಪಡೆಯಿತು.

ಸ್ಥಳೀಯ ಮೂಲನಿವಾಸಿಗಳಾದ ಖೋಯ್ ಖೋಯ್ ಬಣದ ಜನಗಳಿಂದ ದನಕರುಗಳನ್ನು, ಜಮೀನನ್ನು ಕಿತ್ತುಕೊಂಡು ಜಮೀನನ್ನು ಖಾಸಗೀ ಒಡೆತನ ಪದ್ಧತಿಗೆ ಒಳಪಡಿಸಿದ ಡಚ್ ವಲಸೆಗಾರರು ಅಷ್ಟಕ್ಕೇ ನಿಲ್ಲಲಿಲ್ಲ. ಜಮೀನಿನ ಮೇಲೆ ಕಂದಾಯ ವಸೂಲಿ ಮಾಡಲಾರಂಭಿಸಿದರು. ಈ ರೀತಿ ಕಂದಾಯ ಕೊಡಲಾರದವರು ಡಚ್ಚರು ಕಿತ್ತುಕೊಂಡ ಫಾರ್ಮ್‌ಗಳಲ್ಲಿ ದುಡಿಯಬೇಕಾಗಿತ್ತು. ಈ ರೀತಿ ಒಂದೇ ಏಟಿನಲ್ಲಿ ಮತ್ತಷ್ಟು ಜಮೀನನ್ನೂ, ಅಗ್ಗದರದ ದುಡಿಮೆಯನ್ನೂ ಪಡೆಯಲು ಈ ವಸಾಹತುಗಾರರಿಗೆ ಸಾಧ್ಯವಾಯಿತು. ಇದನ್ನು ಸ್ಥಳೀಯ ಮೂಲನಿವಾಸಿಗಳು ತಲೆಬಗ್ಗಿಸಿ ಒಪ್ಪಿಕೊಂಡರೆಂದೇನಲ್ಲ. ವಲಸೆಗಾರರ ತೀವ್ರವಾದ ಹೋರಾಟಗಳು ನಡೆದವು. ಕೆಲವು ಕಡೆ ಈ ಹೋರಾಟಗಳಿಗೆ ಜಯವೂ ದೊರೆಯಿತು. ಆದರೆ ಒಟ್ಟಿನಲ್ಲಿ ಆಧುನಿಕ ಶಸ್ತ್ರಾಸ್ತ್ರಗಳನ್ನು ಹೊಂದಿದ್ದ ವಲಸೆಗಾರರ ಕೈಮೇಲಾಯಿತು. ಅಲ್ಲದೆ ಆಫ್ರಿಕಾದ ಬೇರೆ ಬೇರೆ ಬಣಗಳು ಪರಸ್ಪರ ಸಂಪರ್ಕವಿಲ್ಲದೆ ಪ್ರತ್ಯೇಕವಾಗಿ ಹೋರಾಟ ನಡೆಸಿದ್ದರು. ಈ ಅನೈಕ್ಯತೆಯೂ ಅವರ ಸೋಲಿಗೆ ಕಾರಣವಾಗಿತ್ತು. ಲೂಟಿ, ದರೋಡೆ, ಮೋಸ ಹಾಗೂ ಗುಲಾಮ ಪದ್ಧತಿಯ ಮೂಲಕ ತಮ್ಮ ಅಧಿಕಾರವನ್ನು ವಸಾಹತುಗಾರರು ವಿಸ್ತರಿಸುತ್ತಾ ಹೋದರು. 18ನೇ ಶತಮಾನದ ಕೊನೆಯ ಹೊತ್ತಿಗೆ ಉತ್ತರ ಹಾಗೂ ಪೂರ್ವಕ್ಕೆ ಹೊರಟು ಹೋದ ಕೆಲವು ಗುಂಪುಗಳನ್ನು ಬಿಟ್ಟರೆ ದಕ್ಷಿಣ ಆಫ್ರಿಕಾದ ಉಳಿದ ಬಣಗಳ ಸದಸ್ಯರು ತಮ್ಮ ದನ-ಕರು ಹಾಗೂ ಪ್ರದೇಶಗಳನ್ನು ಡಚ್ಚರ ಆಕ್ರಮಣದಿಂದ ಕಳೆದುಕೊಂಡು ಭೂಹೀನ ಗುಲಾಮರಾದರು. 1806ರ ನಂತರ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಕ್ರಮೇಣ ದಕ್ಷಿಣ ಆಫ್ರಿಕಾದ ಹಲವು ಪ್ರದೇಶಗಳ ಮೇಲೆ ಅಧಿಕಾರ ಜಮಾಯಿಸತೊಡಗಿದಂತೆ ಜಮೀನು ಹಾಗೂ ಪಶುಸಂಪತ್ತನ್ನು ಕಸಿದುಕೊಳ್ಳುವ ಈ ಪ್ರಕ್ರಿಯೆ ಮುಂದುವರೆಯಿತು.

ಬ್ರಿಟಿಷ್ ಸಾಮ್ರಾಜ್ಯಶಾಹಿ

ಕೈಗಾರಿಕಾ ಕ್ರಾಂತಿಯಿಂದಾಗಿ ಬ್ರಿಟನ್ನಿನ ಕೈಗಾರಿಕಾ ಉತ್ಪಾದನೆಗೆಳಿಗೆ ಮಾರುಕಟ್ಟೆಯನ್ನು ಹಾಗೂ ಬ್ರಿಟನ್ನಿನ ವಿಸ್ತರಿಸುತ್ತಿದ್ದ ಸಾಮ್ರಾಜ್ಯದಲ್ಲಿ ಬಹಳ ಬೇಡಿಕೆಯಿದ್ದ ಕೃಷಿ ಉತ್ಪಾದನೆಗಳ ಪೂರೈಕೆಯನ್ನು ಹೆಚ್ಚಿಸಲು ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಕೇಪ್‌ನಲ್ಲಿ ಮಾರುಕಟ್ಟೆ ಸ್ಥಾಪಿಸಿದರು. ಆದರೆ ಕ್ರಮೇಣ ಬೋಅರ್ ಅಥವಾ ಆಫ್ರಿಕನ್ಸ್ (ಡಚ್ ವಲಸೆಗಾರರ ವಂಶಜರನ್ನು ಹೀಗೆಂದು ಕರೆಯುತ್ತಾರೆ) ಜನಾಂಗದ ವಿಸ್ತರಣೆಯನ್ನು ತಡೆಯಲು ಬ್ರಿಟಿಷರೂ ಕೇಪ್ ಪ್ರದೇಶವನ್ನು ಡಚ್ಚರಿಂದ ಕಿತ್ತುಕೊಂಡರು. ನಂತರ ನಾಟಾಲ್ ಪ್ರದೇಶವನ್ನು ಇದೇ ರೀತಿ ವಶಪಡಿಸಿಕೊಳ್ಳಲಾಯಿತು. 1834ರಲ್ಲಿ ಬ್ರಿಟನ್ನಿನಲ್ಲಿ ಜನರ ಚಳುವಳಿಯ ಪರಿಣಾಮವಾಗಿ ಗುಲಾಮ ಪದ್ಧತಿಯನ್ನು ರದ್ದುಗೊಳಿಸಿದ್ದ ಬ್ರಿಟಿಷರು ಕೇಪ್ ಹಾಗೂ ನಾಟಾಲ್‌ನಲ್ಲೂ ಅದನ್ನೆ ಜಾರಿಗೆ ತಂದರು. ಇದನ್ನು ಡಚ್ ವಲಸೆಗಾರರ ವಂಶಜರಾದ ಈಗ ರೈತರಾಗಿದ್ದ ಬೋಅರರು ಅಥವಾ ಆಫ್ರಿಕನ್ಸ್ ಜನಾಂಗದವರು ಒಪ್ಪಲಿಲ್ಲ. ಆದರೆ ಬ್ರಿಟಿಷ್ ಸಾಮ್ರಾಜ್ಯವನ್ನು ವಿರೋಧಿಸುವ ಶಕ್ತಿಯಿಲ್ಲದೆ ಉತ್ತರದ ಕಡೆಗೆ ವಲಸೆ ಹೊರಟರು. ಹೀಗೆ ಹೋಗುವಾಗಲು ಹಿಂದೆ ಮಾಡಿದಂತೆ ದರೋಡೆ, ಮೋಸ, ವಂಚನೆಯ ಮೂಲಕ ಆಫ್ರಿಕನ್ ಮೂಲನಿವಾಸಿಗಳ ಜಮೀನು ಹಾಗೂ ಪಶುಸಂಪತ್ತಿನ ಮೇಲೆ ಅಧಿಕಾರ ನಡೆಸುತ್ತಾ ಹೋದರು. ಆರೆಂಜ್ ಫ್ರೀ ಸ್ಟೇಟ್ ಹಾಗೂ ಟ್ರಾನ್ಸ್‌ವಾಲ್ ಎಂಬ ಪ್ರದೇಶಗಳನ್ನು ತಮ್ಮ 'ಗಣರಾಜ್ಯ'ಗಳೆಂದು ಘೋಷಿಸಿಕೊಂಡರು.

1867 ರಲ್ಲಿ ಆರೆಂಜ್‌ಫ್ರೀಸ್ಟೇಟ್‌ನಲ್ಲಿ ಹಾಗೂ ಸ್ವಲ್ಪ ಸಮಯದ ನಂತರ ಟ್ರಾನ್ಸ್‌ವಾಲ್‌ನಲ್ಲಿ ಕ್ರಮವಾಗಿ ವಜ್ರದ ಹಾಗೂ ಚಿನ್ನದ ಗಣಿಗಳ ಪತ್ತೆಯೊಂದಿಗೇ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಹಾಗೂ ಬೋಅರ್ ವಸಾಹತುಶಾಹಿಗಳ ನಡುವೆ ಈ ಗಣಿಗಳ ಹಾಗೂ ಅದರಲ್ಲಿ ದುಡಿಯಬೇಕಾದ ಆಫ್ರಿಕನ್ ಕಾರ್ಮಿಕರ ಮೇಲೆ ಹತೋಟಿ ಪಡೆಯುವುದಕ್ಕಾಗಿ ತೀವ್ರ ಸ್ಪರ್ಧೆ ನಡೆಯಿತು, ಬ್ರಿಟಿಷ್ ಬಂಡವಾಳ ಹಾಗೂ ಬೋಅರ್ ರೈತರ ನಡುವೆ 1899-1901 ಅವಧಿಯಲ್ಲಿ ತೀವ್ರ ಯುದ್ಧ ನಡೆಯಿತು. ಇದನ್ನು ಆ್ಯಂಗ್ಲೊ-ಬೋಅರ್ ಯುದ್ಧವೆನ್ನುತ್ತಾರೆ. ಈ ಯುದ್ಧದ ಕೊನೆಯಲ್ಲಿ ಬೋಅರ್ ಜನಾಂಗಿ ಸಂಪೂರ್ಣವಾಗಿ ಸೋತುಹೋಯಿತು. ಆದರೂ ತನ್ನ ಬಂಡವಾಳಕ್ಕೆ ಜಮೀನನ್ನೂ, ದುಡಿಮೆಯನ್ನೂ ಪಡೆಯುವ ಸಮಸ್ಯೆ ಬ್ರಿಟಿಷ್ ಸಾಮ್ರಾಜ್ಯಶಾಹಿಗಳಿಗಿತ್ತು. ಆದ್ದರಿಂದ ಪರಾಜಿತರಾದ ಬೋಅರ್ ಜನಾಂಗದ ವಸಾಹತುಶಾಹಿಗಳೊಂದಿಗೆ ಒಪ್ಪಂದಮಾಡಿಕೊಂಡಿತು.

ವರ್ಣದ್ವೇಷೀ ದಕ್ಷಿಣ ಆಫ್ರಿಕಾದ ಜನನ

ಇದರ ಫಲವಾಗಿಯೇ ಬ್ರಿಟಿಷರ ವಶಕ್ಕೆ ಹೋಗಿದ್ದ ಕೇಪ್ ಹಾಗೂ ನಾಟಾಲ್ ಮತ್ತು ಬೋಅರರ 'ಗಣರಾಜ್ಯ'ಗಳಾದ ಆರೆಂಜ್‌ಫ್ರೀಸ್ಟೇಟ್ ಹಾಗೂ ಟ್ರಾನ್ಸ್‌ವಾಲ್ ಇವು ನಾಲ್ಕು ಪ್ರದೇಶಗಳು ಸೇರಿ ದಕ್ಷಿಣ ಆಫ್ರಿಕಾ 1910 ರಲ್ಲಿ ಅಸ್ತಿತ್ವಕ್ಕೆ ಬಂತು. ದಕ್ಷಿಣ ಆಫ್ರಿಕಾದ ಮೂಲ ನಿವಾಸಿಗಳಾದ ಕರಿಯ ಜನಾಂಗಗಳು ಹಾಗೂ ಬಿಳಿಯರ ತೋಟಗಳಲ್ಲಿ ದುಡಿಯಲೆಂದೇ ಆಫ್ರಿಕಾಕ್ಕೆ ಆಮದುಮಾಡಿಕೊಂಡ ಭಾರತೀಯ ಸಂತತಿಯವರು ಮತ್ತು ಮಿಶ್ರಜನಾಂಗದ ಜನರು ಬಿಳಿಯರ ಅಡಿಯಾಳುಗಳಾಗಿಯೇ ಉಳಿದು ದಕ್ಷಿಣ ಆಫ್ರಿಕದ ಅಪಾರ ಸಂಪತ್ತಿನ ಒಡೆತನ ಬಿಳಿಯರ ಕೈಯಲ್ಲೇ ಇರಬೇಕೆಂಬುದೇ ಈ ಒಪ್ಪಂದದ ಹಿನ್ನಲೆಯಲ್ಲಿದ್ದ ಮೂಲ ಪ್ರೇರಣೆ. ಹೀಗೆ ಅಸ್ತಿತ್ವಕ್ಕೆ ಬಂದ ದೇಶದಲ್ಲಿ ವರ್ಣದ್ವೇಷದ ಹಾಗೂ ಜನಾಂಗದ್ವೇಷದ ನೀತಿ ಆಳುವ ವರ್ಗಗಳ ಅಧಿಕೃತ ಧೋರಣೆಯಾಗುವುದು ಸ್ವಾಭಾವಿಕವೇ ಆಗಿತ್ತು. ಈ ಒಪ್ಪಂದದ ಒಂದು ವರ್ಷದ ಮೊದಲು 1909 ರಲ್ಲಿ ಕೇಪ್ ಪ್ರದೇಶದಲ್ಲಿ ಬ್ರಿಟಿಷರು ಒಂದು ಕಾನೂನನ್ನು ಜಾರಿಗೆ ತಂದಿದ್ದರು. ಅದರ ಹೆಸರು ಅಲೆಮಾರಿ ಕಾನೂನು ಎಂದು. ಇದರ ಪ್ರಕಾರ ಖೋಯ್ ಬಣಕ್ಕೆ ಸೇರಿದ ಆಫ್ರಿಕನ್ನರು ಯಾವುದೇ ಬಿಳಿಯನ ನೌಕರಿಯಲ್ಲಿ ಇಲ್ಲದಿದ್ದರೆ ಅವರು ಅಲೆಮಾರಿಗಳು. ಈ ರೀತಿಯ ಅಲೆಮಾರಿತನ ಒಂದು ಅಪರಾಧ. ತಾನು ಅಲೆಮಾರಿಯಲ್ಲ ಎಂದು ಸಿದ್ಧಪಡಿಸಲು ಪ್ರತಿಯೊಬ್ಬ ಆಫ್ರಿಕನ್ ಒಂದು ಪಾಸನ್ನು (ಅಥವಾ ರಹದಾರಿಯನ್ನು) ಪಡೆದಿರಬೇಕು. ಈ ಪತ್ರವನ್ನು ಪಡೆಯಬೇಕಾದರೆ ಒಬ್ಬ ಬಿಳಿಯ ಮಾಲೀಕನೊಂದಿಗೆ ಉದ್ಯೋಗದ ಲಿಖಿತ ಕರಾರು ಮಾಡಿಕೊಂಡಿರಬೇಕು. ಈ ರೀತಿ ಖೋಯ್ ಜನರು ತಮ್ಮ ಇದ್ದಬದ್ದ ಜಮೀನನ್ನು ಕಳೆದುಕೊಂಡು ಖಾಯಂ ಆಗಿ ಸಂಬಳದ ಆಳುಗಳಾಗಬೇಕಾಯಿತು. ಈ ದಮನಕಾರೀ ವರ್ಣದ್ವೇಷ ನೀತಿಯೇ ಹೊಸದಾಗಿ ಅಸ್ತಿತ್ವಕ್ಕೆ ಬಂದ ದಕ್ಷಿಣ ಆಫ್ರಿಕಾದಲ್ಲಿ 1911ರಲ್ಲಿ "ಸ್ಥಳೀಯ ಕೂಲಿ ಹತೋಟಿ ನಿಯಮಗಳು" ಎಂಬ ಹೆಸರಲ್ಲಿ ಕಾನೂನುಬದ್ಧವಾಯಿತು. ಇದೇ ರೀತಿ ಎರಡು ವರ್ಷಗಳ ನಂತರ 1913 ರಲ್ಲಿ ಜಮೀನು ಕಾಯ್ದೆಯನ್ನು ಜಾರಿಗೊಳಿಸಲಾಯಿತು. 1652 ರಿಂದ ಡಚ್ ವಲಸೆಗಾರರು ಹಾಗೂ ಬ್ರಿಟಿಷ್ ಸಾಮ್ರಾಜ್ಯಶಾಹಿಗಳು ಮೋಸ, ವಂಚನೆ, ಸುಲಿಗೆ ಹಾಗೂ ಹಗಲು ದರೋಡೆಯ ಮೂಲಕ ಸ್ವಾಧೀನಪಡಿಸಿಕೊಂಡ ಜಮೀನಿನ ಮಾಲೀಕತ್ವವನ್ನು ಇದು ಕಾನೂನುಬದ್ಧಗೊಳಿಸಿತು. ಆಫ್ರಿಕನ್, ಭಾರತೀಯ ಹಾಗೂ ಮಿಶ್ರ ಸಂತತಿಯ ಬಹುಸಂಖ್ಯಾತ ಕೂಲಿಗಾರರು, ಕಾರ್ಮಿಕರು ತಮ್ಮ ನೆಲದಲ್ಲೇ ಎರಡನೆಯ ದರ್ಜೆಯ ನಾಗರಿಕರಾದರು; ಅಲ್ಪಸಂಖ್ಯಾತ ಬಿಳಿಯ ಜನಾಂಗಗಳ ಸುಖ ಸಮೃದ್ಧಿಯನ್ನು ಹೆಚ್ಚಿಸುವುದಕ್ಕಾಗಿಯೇ ಇರುವ ಯಂತ್ರಸಮಾನ ಜೀವಿಗಳಾಗಿ ಮುಂದುವರಿದರು.

ಈಗ ದಕ್ಷಿಣ ಆಫ್ರಿಕಾ ಬೂರ್ಜ್ವಾ ದೇಶಗಳಲ್ಲೇ ಒಂದು ವಿಶಿಷ್ಟವಾದ ಸ್ಥಾನ ಪಡೆದಿದೆ. ಯಾಕೆಂದರೆ ಬೇರೆ ಬಂಡವಾಳಶಾಹಿ ದೇಶಗಳಲ್ಲಿ, ವಿಶೇಷವಾಗಿ ಪಶ್ಚಿಮ ಯುರೋಪಿನಲ್ಲಿ ಬೂರ್ಜ್ವಾವರ್ಗ ಕಾರ್ಮಿಕವರ್ಗಕ್ಕೆ ಸ್ವಲ್ಪ ಮಟ್ಟಿನ ರಿಯಾಯಿತಿ ಕೊಡಲೇಬೇಕಾಗಿತ್ತು; ಊಳಿಗಮಾನ್ಯ ಪದ್ಧತಿಯ ವಿರುದ್ಧ ನಡೆದ ಬೂರ್ಜ್ವಾಕ್ರಾಂತಿಯ ಫಲವಾಗಿ ಸ್ವಲ್ಪಮಟ್ಟಿನ ಪ್ರಜಾಸತ್ತಾತ್ಮಕ ಹಕ್ಕುಗಳು ಎಲ್ಲರಿಗೂ ದೊರೆತಿದ್ದವು. ಆದ್ದರಿಂದ ಬೇರೆ ಕಡೆ ಅತೀ ಹೆಚ್ಚು ಲಾಭಗಳಿಸುವ ಬೂರ್ಜ್ವಾ ಆಸೆಗೆ ಹಿಡಿತವಿದೆ. ಆದರೆ ದಕ್ಷಿಣ ಆಫ್ರಿಕಾದಲ್ಲಿ ಹೀಗಾಗಲಿಲ್ಲ ಎಂದು ಅಲ್ಲಿನ ಇತಿಹಾಸದಿಂದ ನಾವು ತಿಳಿದುಕೊಂಡಿದ್ದೇವೆ. ಇಲ್ಲಿ ಬಂಡವಾಳಶಾಹಿ ಊಳಿಗಮಾನ್ಯ ಪ್ರಭುವಿನ ಹಕ್ಕುಗಳನ್ನು ತಾನೇ ಕಿತ್ತುಕೊಂಡ. ಅಲ್ಲದೆ ಆಫ್ರಿಕಾದ ಕಾರ್ಮಿಕ ಎಲ್ಲಿ, ಯಾವಾಗ, ಯಾವ ಬೆಲೆಗೆ ಮತ್ತು ಯಾವ ಶರತ್ತುಗಳ ಮೇಲೆ ತನ್ನ ಶ್ರಮಶಕ್ತಿಯನ್ನು ಮಾರಬಹುದು ಎಂಬುದನ್ನು ನಿರ್ಧರಿಸುವ ಹಕ್ಕನ್ನು ತಾನೇ ಇಟ್ಟುಕೊಂಡ. "ಸ್ಥಳೀಯರಿಗೆ ಉತ್ತಮವಾದದ್ದು ಯಾವುದು" ಎಂದು ನಿರ್ಧರಿಸುವ ಹಕ್ಕನ್ನು ತನ್ನಲ್ಲೆ ಇಟ್ಟುಕೊಂಡ. ಇದರ ಫಲವಾಗಿ ದಕ್ಷಿಣ ಆಫ್ರಿಕಾದ ಬಂಡವಾಳಶಾಹಿಗೆ ಬೇರೆ ಬಂಡವಾಳಶಾಹೀ ದೇಶಗಳಂತೆ ಪ್ರಜಾಪ್ರಭುತ್ವ ಶಾಂತಿ ಇತ್ಯಾದಿಗಳ ಮುಸುಕುಹೊದ್ದುಕೊಳ್ಳಬೇಕೆಂದು ಅನಿಸಲಿಲ್ಲ. ಆದ್ದರಿಂದಲೇ ಇಲ್ಲಿನ ಬಂಡವಾಳಶಾಹಿ ಯಾವ ಮುಲಾಜೂ ಇಲ್ಲದೆ ತನ್ನ ಕ್ರೂರ ನಗ್ನ ಸ್ವರೂಪವನ್ನು ಪ್ರದರ್ಶಿಸುತ್ತಿದೆ.

ವಿಮೋಚನಾ ಹೋರಾಟದ ಆರಂಭ

ಬಂಡವಾಳಶಾಹಿ ತನ್ನ ಗೋರಿಯನ್ನು ತಾನೇ ತೋಡಿಕೊಳ್ಳುತ್ತದೆ. ದಕ್ಷಿಣ ಆಫ್ರಿಕಾದ ಸಂದರ್ಭದಲ್ಲೂ ಇದು ನಿಜವಾಗುತ್ತಿದೆ. ಯಾಕೆಂದರೆ ಬಿಳಿಯ ಅಲ್ಪಸಂಖ್ಯಾತ ಬಂಡವಾಳಶಾಹಿಗಳು ತಮ್ಮ ಲಾಭಕ್ಕಾಗಿ ಆಫ್ರಿಕನ್ ಜನಾಂಗಗಳನ್ನು ಹೆಚ್ಚೆಚ್ಚು ದಮನಮಾಡಲಾರಂಭಿಸಿದ ಒಂದು ಪರಿಣಾಮವೆಂದರೆ ಅದುವರೆಗೆ ಪರಸ್ಪರ ಸಂಪರ್ಕವಿಲ್ಲದ ಅಥವಾ ಪರಸ್ಪರ ದ್ವೇಷಸಾಧಿಸುತ್ತಿದ್ದ ವಿವಿಧ ಆಫ್ರಿಕನ್ ಬಣಗಳು ತಮ್ಮ ನಡುವಿನ ಭೇದಭಾವವನ್ನು ಬಿಟ್ಟು ಒಂದಾಗಲಾರಂಭಿಸಿದರು. ತಮ್ಮ ಶತ್ರುವನ್ನು ಗುರುತಿಸಲಾರಂಭಿಸಿದರು. ಇದರ ಫಲವಾಗಿಯೇ 1912ರ ಜನವರಿ 8ರಂದು ಆಫ್ರಿಕನ್ ನೇಶನಲ್ ಕಾಂಗ್ರೆಸ್ (ಸೌತ್ ಆಫ್ರಿಕಾ) (ಅಥವಾ ಸಂಕ್ಷೇಪವಾಗಿ ಎ.ಎನ್.ಸಿ.) ಸ್ಥಾಪನೆಯಾಯಿತು. ಇಲ್ಲಿಂದ ಬಿಳಿಯರ ವಿರುದ್ಧ ಐಕ್ಯಹೋರಾಟ ಆರಂಭವಾಯಿತು. ಹೋರಾಟ ಮುಂದುವರಿದಂತೆ ಭಾರತೀಯ ವಂಶದ ಜನರಿಂದಲೂ ಮಿಶ್ರ ಸಂತತಿಯವರಿಂದಲೂ ಎ. ಎನ್. ಸಿ. ಗೆ ಹೆಚ್ಚೆಚ್ಚು ಬೆಂಬಲ ದೊರೆಯಲಾರಂಭಿಸಿತು. 1920ರಲ್ಲಿ ಗಣಿಕಾರ್ಮಿಕರೂ ಸರಕಾರದ ವಿರುದ್ಧ ಎದ್ದು ನಿಂತು ಮುಷ್ಕರ ಹೂಡಿದರು. 1921 ರಲ್ಲಿ ದಕ್ಷಿಣ ಆಫ್ರಿಕಾದ ಕಮ್ಯುನಿಸ್ಟ್ ಪಕ್ಷ ಜನ್ಮತಾಳಿತು. ಭಾರತೀಯರ ಇಂಡಿಯನ್ ನ್ಯಾಶನಲ್ ಕಾಂಗ್ರೆಸ್ ವರ್ಣದ್ವೇಷದ ವಿರುದ್ಧ ಹೋರಾಟದಲ್ಲಿ ಭಾಗವಹಿಸಲಾರಂಭಿಸಿತು. ಹೋರಾಟ ವ್ಯಾಪಕವಾಗುತ್ತಿದ್ದಂತೆ ಬಿಳಿಯರ ಸರಕಾರ ಅದನ್ನು ಕ್ರೂರವಾಗಿ ದಮನಿಸಲಾರಂಭಿಸಿತು. ಜಗತ್ತಿನ ರಾಜಕಾರಣದಲ್ಲಿ ಸಮಾಜವಾದಿ ಬಣದ ಉದಯದೊಂದಿಗೆ ಹೋರಾಟಗಾರರಿಗೆ ಹೊಸ ಉತ್ಸಾಹ ಮೂಡಿತು. 1948ರಲ್ಲಿ ಮ್ಯಾಂಡೆಲಾ, ಸಿಸುಲು, ತಾಂಬೋ ಮೊದಲಾದ ವಿದ್ಯಾವಂತ ಯುವಕರು ಎ.ಎನ್.ಸಿ. ಯೂತ್‌ಲೀಗ್ ಆರಂಭಿಸಿದರು.

(ಮುಂದುವರೆಯುವುದು)

ಸ್ವಾತಂತ್ರ್ಯ ಹೋರಾಟದ ಎಲ್ಲಾ ಮೌಲ್ಯಗಳ ವಿರೋಧಿ

(3ನೇ ಪುಟದಿಂದ)

ಇದರ ಬಗ್ಗೆ ಯಾವ ಸಮಾಜ ವಿರೋಧಿ ಮೇಲೆ, ಜಮೀನುದಾರರ ಮೇಲೆ ಕ್ರಮಕೈಗೊಳ್ಳಲಾಗಿದೆ? ಸರ್ಕಾರ ಕ್ರಮಕೈಗೊಳ್ಳುವುದು ಈ ದಮನಕ್ಕೊಳಗಾದವರ ಬಗ್ಗೆ.

ಈ ಕಾಯಿದೆಯ ನಿಜವಾದ ಉದ್ದೇಶವೆ ಬೇರೆ. ಇದು ಹಿಂದಿನ ಅನುಭವಗಳಿಂದಲೂ ಸಿದ್ಧವಾಗುತ್ತದೆ. ಇದು ರಾಷ್ಟ್ರೀಯ ಭದ್ರತೆಗೋಸ್ಕರ ಅಲ್ಲ. ರಾಷ್ಟ್ರದ ಭದ್ರತೆಗೆ ಎಲ್ಲಿ ಧಕ್ಕೆ ಬಂದಿದೆ?

ಕಾಂಗ್ರೆಸ್ (ಐ) ಭದ್ರತಾ ಕಾಯಿದೆ

ಇದು ವಾಸ್ತವವಾಗಿ, ಕಾಂಗ್ರೆಸ್ (ಐ) ಭದ್ರತಾ ಕಾಯಿದೆ. ಅವರು ಕಷ್ಟದಲ್ಲಿದ್ದಾರೆ. ಮೊದಲು ಜನರು ಅವರನ್ನು ಕೇಂದ್ರಕ್ಕೆ ಭಾರಿ ಬಹುಮತದಿಂದ ಆರಿಸಿದರು. ಆದರೆ ಅವರು ಸಮಸ್ಯೆಗಳನ್ನು ಬಗೆಹರಿಸಲಿಲ್ಲ. ಆದ್ದರಿಂದ ವಿಧಾನಸಭೆ ಚುನಾವಣೆಗಳಲ್ಲಿ ಮತಗಳು ಕಡಿಮೆಯಾದುವು. ಪ್ರಜಾಸತ್ತಾತ್ಮಕ ಹಕ್ಕುಗಳು ಇದ್ದರೆ ಜನರು ತಮ್ಮ ಅಧಿಕಾರ ಚಲಾಯಿಸುತ್ತಾರೆ. ಇದು ಈ ಆಳುವವರ ಭದ್ರತೆಗೆ ಅಡ್ಡಿ. ಅದಕ್ಕೆ ಈ ಕಾಯಿದೆಯ ಪ್ರಕಾರ ಈ ಹಕ್ಕುಗಳನ್ನು ಕಿತ್ತುಕೊಳ್ಳಲು ತಯಾರಿ.

ನಾನು ಅವರನ್ನು ಈ ಕಾಯಿದೆಯ ವಿರುದ್ಧ ಭಾರಿ ಆಂದೋಲನಗಳು ನಡೆಯುತ್ತವೆ ಎಂದು ಎಚ್ಚರಿಸಬಯಸುತ್ತೇನೆ. ಇದರಲ್ಲಿ ಬುದ್ಧಿಜೀವಿಗಳು ಸೇರಿದ್ದಾರೆ. ದಿಲ್ಲಿ ವಿಶ್ವವಿದ್ಯಾಲಯದ 800 ಮಂದಿ ಅಧ್ಯಾಪಕರು ಇದರ ವಿರುದ್ಧ ಸರ್ಕಾರಕ್ಕೆ ಒಂದು ಮನವಿ ಕಳಿಸಿದ್ದಾರೆ. ಇಂತಹ ಕಾಯಿದೆಗಳು ಶಿಕ್ಷಕರು, ಪತ್ರಕರ್ತರು, ವಕೀಲರು, ಟ್ರೇಡ್ ಯೂನಿಯನ್ ಕಾರ್ಯಕರ್ತರು, ರೈತರು ಇವರ ವಿರುದ್ಧವೇ ಉಪಯೋಗವಾಗುವುದು ತಮ್ಮ ಅನುಭವ ಎಂದು ಅವರು ಒತ್ತಿ ಹೇಳಿದ್ದಾರೆ. ಈ ಕಾಯಿದೆಯ ವಿರುದ್ಧ ಭಾರಿ ಸಭೆಗಳು ಆಗುತ್ತಿವೆ. ಆದರೆ ಸರ್ಕಾರ ಕಣ್ಣು, ಕಿವಿ ಮುಚ್ಚಿ ಕುಳಿತಿದೆ. ಇದು ವಿರೋಧ ಪಕ್ಷಗಳಿಗೆ ಚೆನ್ನಾಗಿ ಗೊತ್ತು. ಆದರೆ ಆಳುವ ಪಕ್ಷದಲ್ಲೇ ಇರುವ ಪ್ರಜಾಸತ್ತಾತ್ಮಕ ಶಕ್ತಿಗಳಿಗೆ ಇದು ಗೊತ್ತಿಲ್ಲ. ಅವರಿಗೆ ಒಂದು ವಿಷಯವನ್ನು ನಾನು ಹೇಳಬೇಕೆಂದಿದ್ದೇನೆ. ಇದು ನಾಜೀ ಅತ್ಯಾಚಾರಗಳಿಗೆ ಬಲಿಯಾದ ಪೇಸ್ಟೊರ್ ನಿಮೊರಲ್ ಎಂಬುವನ ಮಾತುಗಳು "ಮೊದಲು ಅವರು ಜ್ಯೂಗಳ ಮೇಲೆ ಅತ್ಯಾಚಾರ ನಡೆಸಿದರು. ನಾನು ಜ್ಯೂ ಅಲ್ಲವಾದ್ದರಿಂದ ಸುಮ್ಮನಿದ್ದೆ. ಮತ್ತೆ ಅವರು ಅದನ್ನೇ ಕಮ್ಯುನಿಸ್ಟರ ಮೇಲೆ ಮಾಸ ನಡೆಸಿದರು. ನಾನು ಕಮ್ಯುನಿಸ್ಟ್ ಅಲ್ಲವಾದ್ದರಿಂದ ಆಗಲೂ ತೆಪ್ಪಗಿದ್ದೆ. ಅನಂತರ, ಅದೇ ಟ್ರೇಡ್ ಯೂನಿಯನ್ ಕಾರ್ಯಕರ್ತರ ಮೇಲೆ ಪುನರಾವರ್ತನೆಯಾಯಿತು. ನಾನು ಆ ಪಂಗಡಕ್ಕೆ ಸೇರಿದವನಲ್ಲವಾದ್ದರಿಂದ ಈಗಲೂ ತೆಪ್ಪಗಿದ್ದೆ. ಆಮೇಲಿನ ಸರದಿ ನನ್ನದಾಗಿತ್ತು. ನನ್ನ ಪರವಾಗಿ ಪ್ರತಿಭಟಿಸುವವರು ಯಾರೂ ಉಳಿದಿರಲಿಲ್ಲ".

ಎಲ್ಲರಿಗೂ ಎಚ್ಚರಿಕೆ

ಈ ತರದ ಕಾಯಿದೆಗಳು ಬಂದರೆ ಏನಾಗುವುದೆಂದು ಪ್ರಜಾಸತ್ತಾತ್ಮಕ ಮೌಲ್ಯಗಳ ಬಗ್ಗೆ ಎಚ್ಚರವಿರುವ ಕಾಂಗ್ರೆಸ್ಸಿಗರು ಯೋಚಿಸಬೇಕು. ನಾನು ಮಹಾತ್ಮಾಗಾಂಧಿಯವರು ಇಂತಹುದೇ ಕಾಯಿದೆಯ, ರೌಲತ್ ಕಾಯಿದೆ (1919). ಬಗ್ಗೆ ಶ್ರೀನಿವಾಸ್ ಶಾಸ್ತ್ರಿಗಳಿಗೆ ಕಳಿಸಿದ, ಇದೇ ಸಭೆಯಲ್ಲಿ ಓದಲ್ಪಟ್ಟ ಟೆಲಿಗ್ರಾಂ ಉದ್ಧರಿಸಬಯಸುತ್ತೇನೆ. "ಈ ಕಾಯಿದೆ ಬಗ್ಗೆ ಜನರ ಧೋರಣೆ ಬಗ್ಗೆ ಹೇಳಬೇಕಾದರೆ ಅದು ಕಟುವಾಗಿದೆ. ಸಾರ್ವಜನಿಕ ಒಳಿತಿಗೆ ತ್ಯಾಗಮಾಡುವ ಅಭ್ಯಾಸ ಹೆಚ್ಚಿನವರಲ್ಲಿರದ್ದರಿಂದ ಅವರು ನಿಷ್ಕ್ರಿಯರಾಗಿ ಕಾಣಬಹುದು. ಆದರೆ ಈ ಕಾಯಿದೆಯನ್ನು ಒತ್ತಾಯಪೂರ್ವಕವಾಗಿ ತಂದರೆ ಈ ಸಹನೆಯ ಕಟ್ಟೆಯೊಡೆಯುವುದು: ನಮ್ಮಿಬ್ಬರಲ್ಲಿ ಈ ಕಾಯಿದೆಯನ್ನು ವಿರೋಧಿಸುವ ಕ್ರಮಗಳ ಬಗ್ಗೆ ಭಿನ್ನಾಭಿಪ್ರಾಯವಿದ್ದರೂ ನೀವು ಈ ಕಾಯಿದೆಯನ್ನು ಬಲವಾಗಿ ವಿರೋಧಿಸುತ್ತೀರೆಂದು ಭಾವಿಸುತ್ತೇನೆ".

ಇದು ಗಾಂಧಿಜೀಯವರ ಎಚ್ಚರಿಕೆಯಾಗಿತ್ತು. ಈ ಆಕ್ರಮಣ ನಮ್ಮ ಮೇಲೆ, ಅಥವಾ ಮಹಾರಾಷ್ಟ್ರ ರೈತರ ಮೇಲೆ, ಕಾರ್ಮಿಕವರ್ಗದ ಮೇಲೆ ಮಾತ್ರವಲ್ಲ. ತುರ್ತುಪರಿಸ್ಥಿತಿಯಲ್ಲಿದ್ದಂತೆ ಎಲ್ಲರ ಮೇಲೂ. ತುರ್ತುಪರಿಸ್ಥಿತಿಯ ಅನುಭವದಿಂದ ಹಲವು ಪ್ರಜಾಸತ್ತಾತ್ಮಕ ಶಕ್ತಿಗಳು ರೂಪುಗೊಂಡಿವೆ. ಆದ್ದರಿಂದಲೇ 'ನಮಗೆ ತುರ್ತುಪರಿಸ್ಥಿತಿಬೇಕು' ಎಂದಿದ್ದರೆ ಇಂದಿರಾ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿರಲಿಲ್ಲ. ಆರ್ಥಿಕ ಸಮಸ್ಯೆಗಳು ಬಹಳವಿದ್ದರಿಂದ, ಕಾಂಗ್ರೆಸ್(ಐ)ಗೆ ಬದಲಿ ಇಲ್ಲದ್ದರಿಂದ ಇದು ಸಾಧ್ಯವಾಯಿತು.

ಆದ್ದರಿಂದ ಕೊನೆಯದಾಗಿ ಈಗಲೂ ಈ ಕಾಯಿದೆಯನ್ನು ಒತ್ತಾಯಪಡಿಸದೆ ಹಿಂತೆಗೆದುಕೊಳ್ಳಬೇಕೆಂದು ಗೃಹಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ. ನಾನು ಮೊದಲೇ ಹೇಳಿದಂತೆ ರೌಲತ್ ಕಾಯಿದೆಯ ವಿರುದ್ಧ ಹೋರಾಡಿದ ನಾಡಿನಿಂದ ಬಂದವರಿಗೆ ಇದು ಭೂಷಣವಲ್ಲ. ಪ್ರಜಾಸತ್ತಾತ್ಮಕ ಕಾಂಗ್ರೆಸ್ಸಿಗರಲ್ಲಿ ಮನವಿಮಾಡಿಕೊಳ್ಳುತ್ತೇನೆ ; ಈ ಕಾಯಿದೆ ಬಂದರೆ ಸ್ವಾತಂತ್ರ್ಯವೆಂಬುದು ಏನೂ ಉಳಿಯುವುದಿಲ್ಲ.

●

ಪರಿಶಿಷ್ಟ ಜಾತಿಗಳ ಸಂಘದ ಸಭೆ

ಪುತ್ತೂರಿನ ಸರ್ಕಾರಿ ನೌಕರರ ಭವನದಲ್ಲಿ 21-12-80 ರಂದು ಪುತ್ತೂರು ವಲಯ ಪರಿಶಿಷ್ಟ ಜಾತಿಗಳ ಸಂಘದ ಸಭೆ ನಡೆಯಿತು. ಅಧ್ಯಕ್ಷತೆಯನ್ನು ಶ್ರೀ ರಾಮಚಂದ್ರ ಅವರು ವಹಿಸಿದ್ದರು. ಮುಖ್ಯ ಅತಿಥಿಗಳಾಗಿ ಬಿ. ರಾಮಕೃಷ್ಣ ಸಿ. ಹೆಚ್. ಶ್ಯಾಮ ಮತ್ತು ಶ್ರೀ ಜಿ. ಕೆ. ತನ್ನೀರುಭಾವಿ ಅವರು ಬಂದಿದ್ದರು. ಆರಂಭದಲ್ಲಿ ಕಾರ್ಯದರ್ಶಿ ಗೋವಿಂದ ಮಾಸ್ತರ್ ಸ್ವಾಗತಿಸಿದರು.

ಹರಿಜನರ ಮೇಲಿನ ದಬ್ಬಾಳಿಕೆಯನ್ನು ತಡೆಗಟ್ಟಲು ಈ ಸಂಘವನ್ನು ಕಟ್ಟಲಾಗಿದೆ ಎಂದು ಅಧ್ಯಕ್ಷರು ವಿವರಿಸಿದರು. ಜಿ. ಕೆ. ತನ್ನೀರುಭಾವಿ ಅವರು ಮಾತನಾಡುತ್ತಾ ಹರಿಜನರು ಸಂಘಟಿತರಾಗಿ ಹೋರಾಡಬೇಕೆಂದು ಕರೆಕೊಟ್ಟರು. ಬಿ. ರಾಮಕೃಷ್ಣ ಅವರು ಮಾತನಾಡಿ ಬಡವರ ಸಂಘಟನೆಯನ್ನು ಕಟ್ಟಿ ಬೆಳೆಸಬೇಕಾಗಿದೆ ಎಂದರು. ಸಭೆಯಲ್ಲಿ ಕಾಳುಮೇಸ್ತ್ರಿ, ಎಸ್. ಬಾಬು, ಡೀಕಯ್ಯ, ಶಂಕರ್‌ಕೊಡ್ಲು, ಸೀತಾರಾಮ ಮೊದಲಾದವರು ಮಾತನಾಡಿದರು.

●

ಕಾರ್ಮಿಕರ ಮುಷ್ಕರಕ್ಕೆ ಸಿ.ಐ.ಟಿ.ಯು. ಬೆಂಬಲ

ಬೆಂಗಳೂರು ಮತ್ತು ಹೈದರಾಬಾದ್‌ಗಳ ಸಾರ್ವಜನಿಕ ವಲಯಗಳ ಕಾರ್ಖಾನೆ ಕಾರ್ಮಿಕರ ಮುಷ್ಕರಕ್ಕೆ, ಆಡಳಿತವರ್ಗ ಮತ್ತು ಸರ್ಕಾರದ ನಿರ್ಲಕ್ಷವೇ ಕಾರಣ ಎಂದು ಸಿ.ಐ.ಟಿ.ಯು. ಪ್ರಧಾನಕಾರ್ಯದರ್ಶಿ ಪಿ. ರಾಮಮೂರ್ತಿ ಅವರು ಹೇಳಿದ್ದಾರೆ. ಬೆಂಗಳೂರಿನ ಕಾರ್ಮಿಕರ ಒಗ್ಗಟ್ಟನ್ನು ಸಿ.ಐ.ಟಿ.ಯು. ಅಭಿನಂದಿಸುತ್ತದೆ ಮತ್ತು ತನ್ನ ಕೃತ್ಪೂರ್ವಕ ಬೆಂಬಲವನ್ನು ಸೂಚಿಸುತ್ತದೆ ಎಂದೂ ಅವರು ಹೇಳಿದ್ದಾರೆ. ಈ ಹೋರಾಟಕ್ಕೆ ಎಲ್ಲರೂ ಬೆಂಬಲ ಕೊಡಬೇಕೆಂದು ಅವರು ಮನವಿ ಮಾಡಿದ್ದಾರೆ.

●

ಚರ್ಚಾ ಗೋಷ್ಠಿ

ಗುಲಬರ್ಗಾ ಮಹಿಳಾ ವಿಮೋಚನಾ ಸಂಘಟನಾ ಸಮಿತಿಯು ದಿನಾಂಕ 28-12-80 ರಂದು "ಹೆಣ್ಣಿನ ಸ್ಥಾನಮಾನ" ಹಾಗೂ "ವರದಕ್ಷಿಣೆ ಸಮಸ್ಯೆ" ಕುರಿತು ಹಿಂದುಳಿದ ಹಾಸ್ಟೇಲುಗಳ ವಿದ್ಯಾರ್ಥಿನಿಯರನ್ನೊಳಗೊಂಡು ಚರ್ಚಾ ಗೋಷ್ಠಿಯನ್ನು ಏರ್ಪಡಿಸಿತ್ತು. ಕಾರ್ಯಕ್ರಮಕ್ಕೆ ಪುಷ್ಪಾರವರು ಅತಿಥಿಗಳಾಗಿ ಆಗಮಿಸಿದ್ದರು. ಅಧ್ಯಕ್ಷತೆ ಕೆ. ಶರೀಫಾರವರು ವಹಿಸಿದ್ದರು. 30 ಕ್ಕೂ ಮೇಲ್ಪಟ್ಟು ಮಹಿಳೆಯರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಸಭೆಯು ಮಹಿಳೆಯ ಸ್ಥಾನಮಾನಗಳು ಕಡಿಮೆಯಾಗಲು ಆರ್ಥಿಕ ವಿಷಯಗಳೇ ಕಾರಣವಾಗಿರುವುದರಿಂದ ಅವಳು ಆರ್ಥಿಕವಾಗಿ ಮುಂದೆ ಬಂದು ಭದ್ರವಾದಾಗ ಮಾತ್ರ ಅವಳ ಸ್ಥಾನಮಾನಗಳು ಭದ್ರವಾಗುತ್ತವೆ. ಆದ್ದರಿಂದ ಸರಕಾರ ಆರ್ಥಿಕ ಸಮಾನತೆ ನೀಡಿ, ಮಹಿಳೆಯರಿಗೆ ದುಡಿಯುವ ಹಕ್ಕನ್ನು ಮೂಲಭೂತ ಹಕ್ಕುಗಳಲ್ಲೊಂದಾಗಿ ಪರಿಗಣಿಸಬೇಕೆಂದು ಅಭಿಪ್ರಾಯಪಟ್ಟಿತು. ಜೊತೆಗೆ ವರದಕ್ಷಿಣೆ ಪಿಡುಗಿಗೆ ದಿನ ಬೆಳಗಾದರೂ ಅನೇಕ ಯುವತಿಯರು ಬಲಿಯಾಗುತ್ತಿದ್ದಾರೆ. ಅದಕ್ಕಾಗಿ ಸರಕಾರದ ಶಾಸನ ಕೂಡಾ ಇದೆ. ಆದರೂ ಈ ಸಮಸ್ಯೆಗೆ ಇಂತಹ ಕೇವಲ ಶಾಸನಗಳಿಂದ ನಿರ್ಮೂಲನಗೊಳಿಸಲು ಸಾಧ್ಯವಿಲ್ಲ. ಅದಕ್ಕಾಗಿ ರಚನಾತ್ಮಕ ವಿಭಾಗಗಳನ್ನು ತೆರೆದು ದುಂದುವೆಚ್ಚವನ್ನು ನಿಲ್ಲಿಸುವತ್ತ ಪ್ರಾಮಾಣಿಕ ಪ್ರಯತ್ನವನ್ನು ನಡೆಸಬೇಕಾಗಿದೆ—ಎಂದು ಸಭೆಯು ಅಭಿಪ್ರಾಯಪಟ್ಟಿತು. ವಿಚಾರಪೂರ್ಣ ಪ್ರಶ್ನೋತ್ತರಗಳಿಂದ ಚರ್ಚೆ ತುಂಬಾ ಉಪಯುಕ್ತವಾಗಿತ್ತು.

○

'ದೂರವಾಣಿ-ಕೇಬಲ್ಸ್' ಕಾರ್ಮಿಕರ ವಿಜಯ

"ಬೆಂಗಳೂರು ಈಸ್ಟ್ ಇಂಡಸ್ಟ್ರಿಯಲ್ ವರ್ಕರ್ಸ್ ಯೂನಿಯನ್"ಗೆ ಸೇರಿದ, ವೈಟ್‌ಫೀಲ್ಡನಲ್ಲಿರುವ ದೂರವಾಣಿ ಫ್ಯಾಕ್ಟರಿಯ ಕಾರ್ಮಿಕರು 4 ತಿಂಗಳ ಕೆಳಗೆ ಕೆಲವು ಬೇಡಿಕೆಗಳನ್ನು ಮಂಡಿಸಿದ್ದರು. ಬೇಡಿಕೆ ಈಡೇರಿಸುವ ಬದಲು ಸಂಘದ 7 ಜನ ಕಾರ್ಯಕರ್ತರನ್ನು, ಆಡಳಿತ ವರ್ಗ ಸಸ್ಪೆಂಡ್ ಮಾಡಿತ್ತು.

ದೂರವಾಣಿ ಕೇಬಲ್ಸ್‌ನ ಸೋದರ ಸಂಸ್ಥೆಯಾದ ಫರೀದಾಬಾದ್‌ನ ಡೆಲ್ಟನ್ ಕೇಬಲ್ಸ್‌ನ ಕಾರ್ಮಿಕ (ಈ ಫ್ಯಾಕ್ಟರಿಯಲ್ಲಿಯೂ ಸಿ.ಐ.ಟಿ.ಯು. ನೇತೃತ್ವದ ಸಂಘವಿದೆ)ರ ಸೌಹಾರ್ದ ಬೆಂಬಲದಿಂದ ಅವಿರತ ನಡೆಸಿದ ಹೋರಾಟದ ಫಲವಾಗಿ ಡಿಸೆಂಬರ್ 24ರಂದು ಒಪ್ಪಂದಕ್ಕೆ ಬರಲಾಗಿದೆ. ಈ ಒಪ್ಪಂದದ ಪ್ರಕಾರ ಪ್ರತಿ ಕಾರ್ಮಿಕನಿಗೆ 85ರೂ. ನಿಂದ 95ರೂ. ವರೆಗೆ ವೇತನ ಮತ್ತು ತುಟ್ಟಿಭತ್ತೆಯಲ್ಲಿ ಹೆಚ್ಚಳ ದೊರೆತಿದೆ. ಅಲ್ಲದೇ 7 ಜನರ ಸಸ್ಪೆನ್‌ಷನ್ ವಾಪಸ್ ತೆಗೆದುಕೊಳ್ಳಲಾಗಿದೆ. ಈ ಸೌಹಾರ್ದಪೂರ್ಣ ಒಪ್ಪಂದದ ನಂತರ 26-12-80ರಿಂದ ಕಾರ್ಮಿಕರು ಕೆಲಸಕ್ಕೆ ಹಾಜರಾಗಿದ್ದಾರೆ.

3 ತಿಂಗಳು ನಡೆದ ದೀರ್ಘ ಹೋರಾಟಕ್ಕೆ ಸಹಕರಿಸಿದ ಎಲ್ಲ ಕಾರ್ಮಿಕ ಬಾಂಧವರಿಗೂ ಸಂಘ ಕೃತಜ್ಞತೆ ಸೂಚಿಸಿದೆ.

●

ಹಿಂದೂಸ್ತಾನ್ ಹೋಟೆಲ್ ಕಾರ್ಮಿಕರ ವಿಜಯ

ಬೆಂಗಳೂರು ಜಿಲ್ಲಾ ಹೋಟೆಲ್ ಕಾರ್ಮಿಕ ಸಂಘದ ನೇತೃತ್ವದಲ್ಲಿ ಹಿಂದೂಸ್ತಾನ ಹೋಟೆಲ್ ಕಾರ್ಮಿಕರು, ಮಾಲೀಕರ ಕಾರ್ಮಿಕ ವಿರೋಧಿ ನೀತಿಯನ್ನು ಪ್ರತಿಭಟಿಸಿ 16-12-80ರಿಂದ ಮುಷ್ಕರ ಹೂಡಿದ್ದರು. ಸಂಘ ಶುರುಮಾಡಿದ್ದರ ಕಾರಣವಾಗಿ 12 ಜನ ಕಾರ್ಮಿಕರನ್ನು ವಜಾ ಮಾಡಲಾಗಿತ್ತು. ಪೋಲೀಸರ ಬೆಂಬಲ ಪಡೆದು ಮುಷ್ಕರ ಹತ್ತಿಕ್ಕಲು ಮಾಲೀಕರು ಪ್ರಯತ್ನಿಸಿದ್ದರೂ ಕಾರ್ಮಿಕರ ಸಂಘಟಿತ ಪ್ರಯತ್ನದಿಂದ ವಿಫಲಗೊಳಿಸಲಾಯಿತು. 17-12-80 ರಂದು ಹೋಟೆಲ್ ಮುಂಬಾಗದಲ್ಲಿ ನಡೆದ ಬಹಿರಂಗ ಸಭೆಯನ್ನುದ್ದೇಶಿಸಿ ಕಾಂ. ಪಿ.ಕೆ. ಸುಬ್ರಮಣಿ, ಕಾಂ. ಅಡವೀಶ ಮತ್ತು ಸಂಘದ ಪ್ರಧಾನ ಕಾರ್ಯದರ್ಶಿ ಕಾಂ. ರಾಜನ್ ಮಾತನಾಡಿದರು.

28-12-80ರಂದು ಲೇಬರ್ ಆಫೀಸರರೆದುರು ನಡೆದ ಮಾತುಕತೆಯಲ್ಲಿ ಸಂಬಳ ಮತ್ತಿತರ ಬೇಡಿಕೆಗಳ ಬಗ್ಗೆ ಒಪ್ಪಂದಕ್ಕೆ ಬರಲಾಯಿತು. ಈ ಸೌಹಾರ್ದಪೂರ್ಣ ಒಪ್ಪಂದವಾಗುವಲ್ಲಿ ಲೇಬರ್ ಆಫೀಸರ್ ಶ್ರೀ ಗುರುರಾಜ ಭಟ್ ಮತ್ತು ಮಾಲೀಕರ ಸಂಘದ ಶ್ರೀ ಮೊಹಮದ್ ಆಲಿ ಶ್ರಮಿಸಿದ್ದರು.

ಹೋರಾಟಕ್ಕೆ ಬೆಂಬಲಕೊಟ್ಟ ಸರ್ವರಿಗೂ ಸಂಘ ಕೃತಜ್ಞತೆ ಸೂಚಿಸಿದೆ.

●

ಕೆ.ಇ.ಬಿ.ಯ ಲೈನ್‌ಮನ್ ವೃತ್ತಿತರಬೇತಿದಾರರು ಹೋರಾಟದೆಡೆಗೆ

ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯ ಕೈಗಾರಿಕಾ ತರಬೇತಿ ಕೇಂದ್ರ ಎಂದು (ಇಂಡಸ್ಟ್ರಿಯಲ್ ಟ್ರೈನಿಂಗ್ ಸೆಂಟರ್) ಬೆಂಗಳೂರು, ಮಂಗಳೂರು, ಗುಲ್ಬರ್ಗ, ಹುಬ್ಬಳ್ಳಿ ಈ ನಾಲ್ಕು ನಗರಗಳಲ್ಲಿ ತೆರೆದಿದೆ. ಪ್ರತಿ ಕೇಂದ್ರದಲ್ಲೂ 150ರಂತೆ ಒಟ್ಟಿಗೆ 600 ಯುವಕರು ತರಬೇತಿ ಪಡೆಯುತ್ತಿರುತ್ತಾರೆ.

ತರಬೇತಿಯ ಅವಧಿಯು ಮೂರು ವರ್ಷಗಳು. ಮೊದಲನೆಯ ವರ್ಷ 130 ರೂ.ಗಳು ಕೊನೆಯ ವರ್ಷ 150ರೂ.ಗಳನ್ನು ತರಬೇತಿ ವೇತನವೆಂದು ಸರ್ಕಾರ ನೀಡುತ್ತಿದೆ.

ಈ ಶಿಕ್ಷಣಾರ್ಥಿಗಳಿಗೆ ಕುಲುಮೆ, ಮರಗೆಲಸ, ವೈರಿಂಗ್, ಫಿಟ್ಟರ್ ಕೆಲಸ ಇವುಗಳಲ್ಲದೆ ಲೈನ್ ಕೆಲಸಗಳೂ ಹಾಗೂ ಆಪರೇಟಿಂಗ್, ಮೈನ್ ಟ್ರೈನಿಂಗ್ ಕೆಲಸಗಳಲ್ಲಿ ಸಂಪೂರ್ಣವಾಗಿ, ಸಮರ್ಥನೀಯವಾದ ತರಬೇತಿ ಅಲ್ಲವಾದರೂ, ಡಿಪ್ಲೊಮಾದಲ್ಲಿ ಇರಬಹುದಾದ ಕೆಲವು ವಿಷಯಗಳ ಬಗ್ಗೆಯೂ (ಎಂಜಿನಿಯರಿಂಗ್ ಡ್ರಾಯಿಂಗ್, ಟ್ರೇಡ್ ಥಿಯರಿ, ವರ್ಕ್‌ಷಾಪ್ ಸೈನ್ಸ್ ಮತ್ತು ಕ್ಯಾಲಿಕ್ಯುಲೇಷನ್) ಇವುಗಳ ಬಗ್ಗೆಯೂ ತರಬೇತಿ ನೀಡುತ್ತಾರೆ.

ಈ ಮೇಲ್ಕಂಡ ಹಲವು ವೃತ್ತಿಗಳಿಗೆ ಸಂಬಂಧಿಸಿದ ತರಬೇತಿ ನೀಡುತ್ತಿದ್ದರೆ ಕೊನೆಗೆ ತೇರ್ಗಡೆಯಾದಾಗ ಲೈನ್‌ಮ್ಯಾನ್ ಎಂಬ ಸಾಮಾನ್ಯ ಬಿರುದಿನ ಅರ್ಹತಾ ಪತ್ರವನ್ನು ನೀಡುವುದರಿಂದ ಈ ಯುವಜನತೆ ಕಲಿಯುವ ಇತರ ವೃತ್ತಿಯ ವಿಷಯಗಳೆಲ್ಲಾ ಮಣ್ಣುಪಾಲಾಗುವುದಲ್ಲದೇ ಲೈನ್‌ಮ್ಯಾನ್ ಅರ್ಹತಾ ಪತ್ರದಿಂದಾಗಿ ಕೆ. ಇ. ಬಿ.ಯನ್ನು ಬಿಟ್ಟು ಉಳಿದ ಕಾರ್ಖಾನೆಗಳಲ್ಲಿ ಕೆಲಸಕ್ಕೆ ಸೇರಿಕೊಳ್ಳುವಹಾಗಿಲ್ಲ.

ಲೈನ್‌ಮ್ಯಾನ್ ಹುದ್ದೆ ಕೆ.ಇ.ಬಿ. ಯಲ್ಲಿಯಾವಾಗಲೂ ಖಾಲಿ ಇರುವುದಿಲ್ಲ, ಒಂದು ವೇಳೆ ಖಾಲಿ ಇದ್ದರೂ ತರಬೇತಾದ ಅಭ್ಯರ್ಥಿಗಳನ್ನು ಭರ್ತಿ ಮಾಡಿಕೊಳ್ಳಬೇಕೆನ್ನುವ ನಿಯಮವೇನೂ ಇರುವುದಿಲ್ಲ. ಮೂರು ವರ್ಷಗಳ ಅವಧಿ ಮುಗಿದ ನಂತರ ಈ ಯುವಕರು ನಿರುದ್ಯೋಗಿಗಳ ಸಾಲಿಗೆ ಬರುವುದು ಅನಿವಾರ್ಯವಾಗುವುದು.

ತರಬೇತಿಯ ಅವಧಿಯಲ್ಲಿ ಕೆ.ಇ.ಬಿ. ಮಂಡಳಿಯು ವಾರಕ್ಕೊಂದು ಬಾರಿ ಮಾತ್ರ ಥಿಯರಿ ತರಗತಿ ಎಂದು ನಡೆಸಿದರೆ ಉಳಿದ ದಿನಗಳಲ್ಲಿ ಈ ವಿದ್ಯಾರ್ಥಿಗಳಿಂದ ಪೂರ್ಣಾವಧಿ ಉದ್ಯೋಗಸ್ಥರಿಂದ ಪಡೆದುಕೊಳ್ಳಬಹುದಾದುದಕ್ಕಿಂತಲೂ ಹೆಚ್ಚಿಗೆ ದುಡಿಸಿಕೊಳ್ಳುತ್ತಿದೆ ಹಾಗೂ ಗುಲಾಮೀ ಪದ್ಧತಿ ಇಲ್ಲಿ ತಾಂಡವವಾಡುತ್ತಿದೆ.

ಸಾಮಾನ್ಯ ಒಬ್ಬ ಲೈನ್‌ಮ್ಯಾನ್, ಸೂಪರ್ ವೈಸರ್, ಮೇಸ್ತ್ರಿ ಇವರುಗಳು ಈ ಹುಡುಗರ ಮೇಲೆ ಅಧಿಕಾರ ನಡೆಸುತ್ತಿರುತ್ತಾರೆ. ಹಾರೆ, ಗುದ್ದಲಿ, ಪಿಕಾಸಿ, ಪೊರಕೆ, ಕಸ, ಮಣ್ಣು ಹೊರುವ ಬಾಣಲೆ ಇವುಗಳು ಹೆಚ್ಚಿಗೆ ಈ ಶಿಕ್ಷಣಾರ್ಥಿಗಳ ತರಬೇತಿಯ ಸಾಧನಗಳಾಗಿವೆ. ರಸ್ತೆ ಬದಿಯಲ್ಲಿ ಮಣ್ಣು ಹೊರುವುದೂ, ಅಗೆಯುವುದೂ, ಗುಂಡಿತೋಡುವುದೂ ಇಂತಹ ತರಬೇತಿಯನ್ನು ಹೆಚ್ಚಿನ ದಿನಗಳು ಪಡೆಯುತ್ತಿರುವ ಈ ವಿದ್ಯಾರ್ಥಿಗಳನ್ನು ಸಾರ್ವಜನಿಕರೆದುರು ಮೇಲಿನ ಅಧಿಕಾರಿಗಳು ಅವಾಚ್ಯ ಶಬ್ದಗಳನ್ನು ಧಾರಾಳವಾಗಿ ಉಪಯೋಗಿಸುತ್ತ ಶಾರೀರಿಕವಾಗಿಯೂ ಥಳಿಸುವುದುಂಟು.

ಕೆಲವು ವೇಳೆ ಆಡಳಿತ ಪಕ್ಷದ ನಾಯಕರನ್ನು ಆಹ್ವಾನಿಸಲೂ, ಸನ್ಮಾನಿಸಲೂ ಈ ಯುವಕರಿಗೆ ಸುಳ್ಳು ಹೇಳಿ ಲಾರಿಯಲ್ಲಿ ತುಂಬಿಕೊಂಡು ಹೋಗುವುದೂ ಸರ್ವೇಸಾಮಾನ್ಯ. ಇದು 3-1-81ರಂದು ಶ್ರೀ ಎಫ್. ಎಂ. ಖಾನರ ಸನ್ಮಾನ (ಬೆಂಗಳೂರಿನಲ್ಲಿ) ಸಮಾರಂಭದಲ್ಲಿ ನಿದರ್ಶನಕ್ಕೆ ಬಂದಿತು.

ಬಂಡವಾಳಶಾಹಿ, ಭೂಮಾಲೀಕ ಆಡಳಿತಗಾರರ ಘೋಷಣೆಗಳಾದ ನಿರುದ್ಯೋಗಿಗಳಿಗೆ ನಿರುದ್ಯೋಗ ಭತ್ಯೆ, ಸ್ಟೈಫಂಡರಿ, ಅಪ್ರೆಂಟೀಸ್ ಎಂಬಿತ್ಯಾದಿ ಬೋಗಸ್ ಹೇಳಿಕೆಗಳನ್ನು ಮನಗಂಡು ಕೆ. ಇ. ಬಿ. ಯಲ್ಲಿ ಲೈನ್‌ಮನ್ ವೃತ್ತಿ ತರಬೇತಿಯಲ್ಲಿರುವ ಈ ಯುವಕರು ಹೋರಾಟದ ಪಥಕ್ಕಿಳಿಯುವ ತರಾತುರಿಯಲ್ಲಿರುತ್ತಾರೆ. ಬೆಂಗಳೂರಿನ ವಿಭಾಗದ ಯುವಕರು ಕೆ. ಇ. ಬಿ. ಯ ಅಧಿಕಾರಿಗಳಿಗೆ ಮನವಿ ಪತ್ರವನ್ನು ನೀಡಿದ್ದಾರೆ. ಛೇರ್‌ಮನ್‌ಗಳವರ ಸಂದರ್ಶನವನ್ನು ಹಲವು ಬಾರಿ ಕೇಳಿದಾಗ ಆತ ನಿರಾಕರಿಸಿದ. ಮತ್ತೊಬ್ಬ ಅಧಿಕಾರಿ ಮನವಿ ಪತ್ರವನ್ನು ಹುಡುಗರ ಎದುರಿನಲ್ಲೇ ಕಸದ ಬುಟ್ಟಿಗೆ ಎಸೆದ. "ಹೋಗ್ರೋ ಹುಚ್ಚು ಮುಂಡೇವ" ಎಂದು ಅಸಹನೆಯಿಂದ ಕಿರುಚಿದ.

ಮಂಗಳೂರಿನ ವಿಭಾಗದವರು ಈ ವಿಷಯವಾಗಿ ಪೇಪರ್‌ಗಳಲ್ಲಿ ಪ್ರಕಟಿಸಿ, ಕೆ. ಇ. ಬಿ. ಯ ಅಧಿಕಾರಿಗಳನ್ನು ಕರೆಸಿ ಒಂದು ಚರ್ಚಾಕೂಟವನ್ನು ಏರ್ಪಡಿಸಿ ಅಧಿಕಾರಿಗಳ ಬೋಗಸ್‌ತನವನ್ನು ಮುಖತಃ ಕಂಡು ನೊಂದು ನ್ಯಾಯಯುತ ಹೋರಾಟದೆಡೆಗೆ ಮುನ್ನಡೆಯುತ್ತಿದ್ದಾರೆ.

ಬೆಂಗಳೂರಿನಲ್ಲಿ ಒಂದು ಸ್ಥಳೀಯ ಸಮಿತಿಯನ್ನು ಈಗಾಗಲೇ ರಚಿಸಿಕೊಂಡು ಕಾಂ. ಶಿವಕುಮಾರ್‌ರವರನ್ನು ಸಂಚಾಲಕರನ್ನಾಗಿ ಆರಿಸಿ ಈ ಕೆಳಕಂಡ ಬೇಡಿಕೆಗಳನ್ನು ಮುಂದಿಟ್ಟು ಹೋರಾಟಕ್ಕಿಳಿಯುತ್ತಿದ್ದಾರೆ.

1) ತರಬೇತಿಯ ನಂತರ ಕೆ.ಇ.ಬಿ. ಯಲ್ಲೇ ಕೆಲಸ ಖಾಯಂ ಆಗಬೇಕು.

2) ಲೈನ್‌ಮನ್ ಎಂಬ ಅರ್ಹತಾ ಪತ್ರಕ್ಕೆ ಬದಲಾಗಿ ವೃತ್ತಿಗೆ ಸಂಬಂಧಿಸಿ ನೀಡಬೇಕು.

3) ವೃತ್ತಿ ವೇತನವನ್ನು 200 ರೂ. ಗಳಿಂದ 300 ರೂ. ಗಳಿಗೆ ಹೆಚ್ಚಿಸಬೇಕು.

4) ಬೋಧನಾ ತರಗತಿಗಳನ್ನು ವಾರಕ್ಕೆ ಕನಿಷ್ಠ 3 ದಿನಗಳಾದರೂ ನಡೆಸಬೇಕು.

ಈ ಸಾಮಾನ್ಯ ಬೇಡಿಕೆಗಳು ಈಡೇರಬೇಕಿದ್ದರೆ ಸಂಘಟಿತ ಮತ್ತು ಇತರ ಪ್ರಜಾಸತ್ತಾತ್ಮಕ ಶಕ್ತಿಗಳ ಮತ್ತು ಯುವಜನತೆಯ ಬೆಂಬಲ ಅತ್ಯಗತ್ಯ ಎಂಬುದನ್ನು ಅರಿತು ಹೋರಾಟಕ್ಕಿಳಿಯುತ್ತಿರುವುದು ಅರ್ಹ ಬೆಳವಣಿಗೆ.

—ಪ್ರಜಾಸತ್ತಾತ್ಮಕ ಯುವಜನ ಸಂಘಟನೆ, ಬೆಂಗಳೂರು ಜಿಲ್ಲೆ. ●

ಎಸ್.ಎಫ್.ಐ.ನ 3ನೇ ರಾಜ್ಯ ಸಮ್ಮೇಳನ

(2ನೇ ಪುಟದಿಂದ)

ಬೃಹತ್ ಮೆರವಣಿಗೆಯೊಂದಿಗೆ ಪ್ರಾರಂಭವಾಗಿ ಸಾಯಂಕಾಲ ನಗರದ ಆಜಾದ್ ಚೌಕದಲ್ಲಿ ನಡೆದ ಬಹಿರಂಗ ಸಭೆಯ ಅಧ್ಯಕ್ಷತೆಯನ್ನು ಮಾಜಿ ಅಧ್ಯಕ್ಷ ಕಾಂ. ಇಕ್ಬಾಲ್ ಹುಸೇನ್ ವಹಿಸಿದ್ದರು. ಆರಂಭದಲ್ಲಿ ಕಾಂ. ಸೈಫುದ್ದೀನ್ ಚೌದರಿಯವರು ಮಾತನಾಡುತ್ತಾ "ವೈಜ್ಞಾನಿಕ ದೃಷ್ಟಿಕೋನವನ್ನು ಬೆಳೆಸಿಕೊಂಡು ಸಮಸ್ಯೆಗಳ ಪರಿಹಾರಕ್ಕಾಗಿ ಸತತ ಹೋರಾಟ ನಡೆಸಬೇಕು" ಎಂದರು. ಹೊಸ ಸಮಾಜ ನಿರ್ಮಾಣಕ್ಕಾಗಿ ಶ್ರಮಿಸುತ್ತಿರುವ ಇತರ ಶ್ರಮಜೀವಿ ವರ್ಗಗಳ ಜೊತೆಗೆ ಭುಜಕ್ಕೆ ಭುಜ ಕೊಟ್ಟು ಸಹಕರಿಸಬೇಕು ಎಂದು ಕರೆ ಕೊಟ್ಟರು. ನಂತರ ಎಸ್.ಎಫ್.ಐ.ನ ಅಖಿಲಭಾರತ ಅಧ್ಯಕ್ಷ ಕಾಂ. ಎಂ.ಎ. ಬೇಬಿ, ಡಿ.ವೈ.ಓ.ನ ರಾಜ್ಯ ಸಂಚಾಲಕರಾದ ಕಾಂ. ಶ್ರೀರಾಂರೆಡ್ಡಿ, ಎಸ್.ಎಫ್.ಐ. ಪ್ರಧಾನ ಕಾರ್ಯದರ್ಶಿ ಕಾಂ. ಎಸ್.ಆರ್. ಆರಾಧ್ಯ, ನೂತನ ಅಧ್ಯಕ್ಷರಾದ ಕಾಂ. ಜಯಕುಮಾರ್ ಮತ್ತು ರಾಜ್ಯಸಮಿತಿ ಸದಸ್ಯೆ ಕಾಂ. ಉಷಾ ಮಂತ್ರಿತರರು ಮಾತನಾಡಿದರು.

ಆರಂಭದಲ್ಲಿ ಕಾಂ. ಹರೀಂದ್ರ ಸ್ವಾಗತಿಸಿದರು. ಕೊನೆಗೆ ಕಾಂ. ಸತ್ಯನಾರಾಯಣರು ವಂದನಾರ್ಪಣೆ ಮಾಡಿದರು.

ಫಲಪ್ರದ ಚರ್ಚೆ, ಚೇತೋಹಾರಿ ವಾತಾವರಣದಿಂದ, ರಾಜ್ಯದ ವಿವಿಧ ಭಾಗಗಳಿಂದ ಆಗಮಿಸಿದ್ದ ಪ್ರತಿನಿಧಿಗಳು ಸಂಘಟನೆ ಬಲಿಷ್ಠಪಡಿಸುವ ಆಶಯದಿಂದ ಚದುರಿದರು.

ವರದಿ : ಎಚ್. ಪಿ. ಅನಿಲ್‌ಕುಮಾರ

ಮುಷ್ಕರ ಯಶಸ್ವಿಗೊಳಿಸಲು ಕರೆ

ಕರ್ನಾಟಕ ಪ್ರಾವಿನ್ಷಿಯಲ್ ಪ್ಲಾಂಟೇಷನ್ ವರ್ಕರ್ಸ್ ಯೂನಿಯನ್ನಿನ ಕಾರ್ಯಕಾರಿ ಸಮಿತಿಯ ವಿಸ್ತೃತ ಸಭೆಯು ತಾ. 9-1-1981 ರಂದು ಚಿಕ್ಕಮಂಗಳೂರಿನಲ್ಲಿ ಸಂಘದ ಆಫೀಸಿನಲ್ಲಿ ಉಪಾಧ್ಯಕ್ಷ ಕಾಂ. ಎ. ಕೆ. ವಿಶ್ವನಾಥರ ಅಧ್ಯಕ್ಷತೆಯಲ್ಲಿ ನಡೆಯಿತು.

ಪ್ರಾರಂಭದಲ್ಲಿ ಹುತಾತ್ಮರಿಗೆ ಶ್ರದ್ಧಾಂಜಲಿಯನ್ನರ್ಪಿಸುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಕಾರ್ಯದರ್ಶಿ ಕಾಂ. ಸಿ. ನಂಜುಂಡಪ್ಪನವರು ಕೊಟ್ಟ ವರದಿಯನ್ನು ಸಭೆಯು ಚರ್ಚಿಸಿ ಅಂಗೀಕರಿಸಿತು.

ಜನವರಿ 20ರಂದು ರಾಜ್ಯದಲ್ಲಿ ನಡೆಯುವ ಪ್ಲಾಂಟೇಷನ್ ಕಾರ್ಮಿಕರ ಐಕ್ಯ ಮುಷ್ಕರವನ್ನು ಯಶಸ್ವಿಗೊಳಿಸಬೇಕೆಂದು ತೋಟಕಾರ್ಮಿಕರಿಗೆ ಕರೆಕೊಡುವ ನಿರ್ಣಯವನ್ನು ಸಭೆಯು ಅಂಗೀಕರಿಸಿತು.

ಕಳೆದ ಮೂರುವರೆ ತಿಂಗಳಿಂದ ಕುದುರೆಮುಖದಲ್ಲಿ ರಿಟ್ರೆಂಚ್‌ಮೆಂಟ್ ವಿರುದ್ಧ ಸಾಮೂಹಿಕ ಸತ್ಯಾಗ್ರಹ ನಡೆಸುತ್ತಿರುವ ಎಚ್. ಎಸ್. ಸಿ. ಎಲ್. ಕಾರ್ಮಿಕರಿಗೆ ಬೆಂಬಲಸೂಚಿಸುವ, ಬೆಂಗಳೂರಿನಲ್ಲಿ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರು ನಡೆಸುತ್ತಿರುವ ಮುಷ್ಕರವನ್ನು ಬೆಂಬಲಿಸುವ, ರಾಷ್ಟ್ರೀಯ ಭದ್ರತಾ ಶಾಸನವನ್ನು ಖಂಡಿಸುವ, ಬೆಲೆ ಏರಿಕೆಯನ್ನು ತಡೆಗಟ್ಟಲು, ಏರಿರುವ ಬೆಲೆಗಳನ್ನು ಇಳಿಸಲು ಪರಿಣಾಮಕಾರಿ ಕ್ರಮಗಳನ್ನು ತೆಗೆದುಕೊಳ್ಳಬೇಕೆಂದು ಸರ್ಕಾರವನ್ನು ಒತ್ತಾಯಪಡಿಸಲು ಐಕ್ಯ ಚಳುವಳಿಯನ್ನು ನಡೆಸಬೇಕೆನ್ನುವ ನಿರ್ಣಯಗಳನ್ನು ಸಭೆಯು ಅಂಗೀಕರಿಸಿತು.

ಬೆಲೆ ಏರಿಕೆಯ ವಿರುದ್ಧ ಮಹಿಳೆಯರ ಪ್ರತಿಭಟನೆ

ಕರ್ನಾಟಕ ರಾಜ್ಯ ದುಡಿಯುವ ಮಹಿಳೆಯರ ಸಮನ್ವಯ ಸಮಿತಿಯು ರಾಜ್ಯದಾದ್ಯಂತ 6-1-81 ರಂದು ಬೆಲೆಯೇರಿಕೆ ವಿರುದ್ಧ ಮಹಿಳೆಯರ ಪ್ರತಿಭಟನೆಯನ್ನು ಸೂಚಿಸಲು ಕರೆ ನೀಡಿತ್ತು.

ಈ ಕರೆಯ ಅನುಗುಣವಾಗಿ ವಿವಿಡೆಡೆ ಪ್ರತಿಭಟನಾ ಮೆರವಣಿಗೆ ಸಭೆಗಳಾದ ವರದಿ ಬಂದಿವೆ.

ಗುಲ್ಬರ್ಗ :

ಮಹಿಳಾ ವಿಮೋಚನಾ ಸಂಘಟನಾ ಸಮಿತಿಯು ಕಾಂ. ಕೆ. ಶರೀಫಾ ಬಸಮ್ಮಾ, ಪ್ರಮಿಳಾಬಾಯಿ, ಮಹಮೂದಾ ಜಲಾಲ ಮುಂತಾದವರ ನೇತೃತ್ವದಲ್ಲಿ ಮೆರವಣಿಗೆ ಹೊರಡಿಸಿ ಬೆಲೆಯೇರಿಕೆ ವಿರುದ್ಧ ಪ್ರತಿಭಟನೆ ಸೂಚಿಸಿತು. ಈ ಕಾರ್ಯಕ್ರಮಕ್ಕೆ ನಗರದ ಮಹಿಳಾ ಸಂಘಟನೆಗಳಾದ ನಿವೇದಿತಾ ಯುವತಿ ಮಂಡಲ ಹಾಗೂ ಸಂಗಮೇಶ್ವರ ಮಹಿಳಾ ಮಂಡಲಗಳು ಬೆಂಬಲ ಸೂಚಿಸಿದವು. ಮಂತ್ರಿಗಳಾದ ಧರ್ಮಸಿಂಗ್, ಮಲ್ಲಿಕಾರ್ಜುನ ಖರ್ಗೆ, ಮಾಣಿಕ್ ರಾವ್ ಪಾಟೀಲ್ ಹಾಗೂ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು.

ಬೀದರ್ :

6-1-81 ರಂದು ಬೀದರ್ ಜಿಲ್ಲೆಯ ಪ್ರಜಾಸತ್ತಾತ್ಮಕ ಮಹಿಳಾ ಸಂಘಟನಾ ಸಮಿತಿಯ ನೇತೃತ್ವದಲ್ಲಿ ಬೆಲೆ ಏರಿಕೆ ವಿರುದ್ಧ ಸುಮಾರು 200 ಜನರ ಮೆರವಣಿಗೆ ನಡೆಸಲಾಯಿತು. ಮಹಿಳೆಯರ ಸಮಸ್ಯೆಗಳಿಗೆ ಸರಕಾರ ಪರಿಹಾರ ನೀಡಬೇಕೆಂದು ಒತ್ತಾಯಿಸಿ ಜಿಲ್ಲೆಯ ವಿಭಾಗಾಧಿಕಾರಿಗಳಿಗೆ ಮನವಿ ಸಲ್ಲಿಸಲಾಯಿತು. ಸ್ಥಳೀಯ ಅಂಬೇಡ್ಕರ್ ಚೌಕಿನಿಂದ ಪ್ರಾರಂಭವಾದ ಮೆರವಣಿಗೆಯಲ್ಲಿ ಸುತ್ತಲಿನ ಹಳ್ಳಿಯ ಕೂಲಿ ಹೆಂಗಸರು, ಕಾಲೇಜು ವಿದ್ಯಾರ್ಥಿನಿಯರು, ಶಿಕ್ಷಕಿಯರು ಭಾಗವಹಿಸಿದ್ದರು. ನಂತರ ನಡೆದ ಬಹಿರಂಗ ಸಭೆಯಲ್ಲಿ ಕಾಂ. ಶೀಲಾ ತಿವಾರಿ ಮತ್ತು ಮಾಲತಿಬಾಯಿಯವರು ಮಾತನಾಡಿದರು.

ರಾಯಚೂರು :

6-1-81ರಂದು ರಾಯಚೂರಲ್ಲೂ ಬೆಲೆಯೇರಿಕೆ ವಿರುದ್ಧ ಪ್ರತಿಭಟನೆ ಸೂಚಿಸಲಾಯಿತು. ಈ ಕಾರ್ಯಕ್ರಮಕ್ಕೆ ಪೂರಕವಾಗಿ 5-1-81 ರಂದು "ಬೆಲೆಯೇರಿಕೆ ಮತ್ತು ಮಹಿಳೆ" ಎಂಬ ವಿಷಯದ ಮೇಲೆ ವಿಚಾರ ಸಂಕಿರಣ ಕಾರ್ಯಕ್ರಮ ಏರ್ಪಡಿಸಿತ್ತು. ಮರುದಿನ (6-1-81)ರ ಬೆಳಿಗ್ಗೆ 10 ಘಂಟೆಗೆ ಸರಿಯಾಗಿ ಎಲ್ಲ ಮಹಿಳಾ ಸಂಘಟನೆಗಳನ್ನು ಪ್ರತಿನಿಧಿಸಿದ ಮಹಿಳೆಯರು ಮೆರವಣಿಗೆ ಹೊರಡಿಸಿದರು. ಬೆಲೆಯೇರಿಕೆಯನ್ನು ಪ್ರತಿಭಟಿಸಿ ಜಿಲ್ಲಾಧಿಕಾರಿಗಳಿಗೆ ಮನವಿ ಅರ್ಪಿಸಲಾಯಿತು. ಸೂಕ್ತ ಕ್ರಮ ಕೈಗೊಳ್ಳುವುದಾಗಿ ಜಿಲ್ಲಾಧಿಕಾರಿಗಳು ಆಶ್ವಾಸನೆ ಇತ್ತರು. ರಾಯಚೂರಿನ ಇತಿಹಾಸದಲ್ಲೇ ಈ ರೀತಿಯ ಮಹಿಳೆಯರ ಪ್ರತಿಭಟನಾ ಮೆರವಣಿಗೆ ಪ್ರಥಮ ಸಲವಾಗಿದೆ. ●

ಜಾಥಾಕ್ಕೆ ಸಂಬಂಧಿಸಿದ ವ್ಯವಸ್ಥೆಯ ವಿವರಗಳು

(1ನೇ ಪುಟದಿಂದ)

ಚಿಕಿತ್ಸೆಯ ಏರ್ಪಾಟಿರಬೇಕು. ಒಂದು ಜಿಲ್ಲೆಯಿಂದ ಇನ್ನೊಂದು ಜಿಲ್ಲೆ ಅಥವಾ ಸೂಕ್ತ ಸಂದರ್ಭದಲ್ಲಿ ವೈದ್ಯರುಗಳನ್ನು ಬದಲಾವಣೆ ಮಾಡಿಕೊಳ್ಳಬಹುದು.

6. ಜಾಥಾದ ಉದ್ದಕ್ಕೂ ಕುಡಿಯುವ ನೀರಿನ ಟ್ಯಾಂಕ್ ಒಂದು ಇರಬೇಕು. ಜಾಥಾದಲ್ಲಿ ಭಾಗವಹಿಸುವ ಸದಸ್ಯರ ಸಾಮಾನು ಸರಂಜಾಮುಗಳನ್ನಿಡಲು ಸಾರಿಗೆ ವಾಹನವೊಂದರ ವ್ಯವಸ್ಥೆ ಮಾಡಬೇಕು. ಜಾಥಾದ ಸದಸ್ಯರು ತಮಗೆಬೇಕಾದ ಅಗತ್ಯ ವಸ್ತುಗಳ ಜೊತೆ ಹೊದಿಕೆ, ಚಂಬು, ಲೋಟ, ತಟ್ಟೆಯನ್ನು ಹೊಂದಿರಬೇಕು.

7. ಜಾಥಾದಲ್ಲಿರುವ ಸದಸ್ಯರನ್ನು ಸದಾ ಉತ್ಸಾಹದಲ್ಲಿಡಲು ಜಾಥಾ ಬೇಡಿಕೆಗಳು ಹಾಗೂ ಉದ್ದೇಶಕ್ಕನುಗುಣವಾಗಿ ಕ್ರಾಂತಿಗೀತೆ,ಬೀದಿ ನಾಟಕಗಳನ್ನು ಆಡುವವರ ತಂಡ, ಧ್ವನಿ ಮುದ್ರಿಕೆಗಳು, ಘೋಷಣೆ ಕೂಗುವವರು ಇಂತಹವರನ್ನೊಳಗೊಂಡ ಸಾಂಸ್ಕೃತಿಕ ತಂಡವನ್ನು ರಚಿಸಿಕೊಳ್ಳಬೇಕು.

8. ಪ್ರತಿಯೊಂದು ಜಾಥಾದ ಜೊತೆಗೆ ಕನಿಷ್ಠ ಎರಡು ವಾಹನಗಳಲ್ಲಿ ರಾಜ್ಯ, ಜಿಲ್ಲಾ ಸಂಚಾಲಕರು ಹಾಗೂ ಸ್ಥಳೀಯ ಸ್ವಾಗತ ಸಮಿತಿಯ ಪ್ರತಿನಿಧಿಗಳಿದ್ದು ಜಾಥಾಕ್ಕೆ ಮುಖಂಡತ್ವ ಹಾಗೂ ಮಾರ್ಗದರ್ಶನ ನೀಡಬೇಕು. ಸ್ವಯಂಸೇವಕರು ಮತ್ತು ಸದಸ್ಯರು ಇವರ ನಿರ್ದೇಶನವನ್ನು ಕಡ್ಡಾಯವಾಗಿ ಪಾಲಿಸಬೇಕು.

ಮೇಲ್ಕಂಡ ಮುಖಂಡರು ಜಾಥಾ ಇರುವ ಸ್ಥಳದಿಂದ ಮುಂದೆ ತಲುಪುವ ಸ್ಥಳಕ್ಕೆ ಮುಂಚಿತವಾಗಿಯೇ ಹೋಗಿ ಅಲ್ಲಿಯ ಏರ್ಪಾಟಿನ ಬಗ್ಗೆ ಮಾಹಿತಿ ಪಡೆದುಕೊಂಡು ಅಲ್ಲಿನ ಸ್ವಾಗತ ಸಮಿತಿಗೆ ಅಗತ್ಯ ನಿರ್ದೇಶನಗಳನ್ನು ನೀಡಿ ಹಿಂದಿನಿಂದ ಬರುತ್ತಿರುವ ಜಾಥಾದ ಬಗ್ಗೆ ವಿವರಗಳನ್ನು ನೀಡಬೇಕು.

9. ಜಾಥಾದಲ್ಲಿ ಭಾಗವಹಿಸುವ ಸದಸ್ಯರು, ಸ್ವಯಂಸೇವಕರು ಹಾಗೂ ಸ್ವಾಗತ ಸಮಿತಿಯ ಸದಸ್ಯರಿಗೆ ಹಳ್ಳಿ ಹಳ್ಳಿಯಿಂದ ಪ್ರತಿಯೊಂದು ಮನೆಯಿಂದಲೂ ರೊಟ್ಟಿ, ಅವಲಕ್ಕಿ ಹಾಗೂ ಇತರ ಆಹಾರ ಪದಾರ್ಥಗಳನ್ನು ಸಂಗ್ರಹಿಸಿ ಊಟದ ವ್ಯವಸ್ಥೆ ಮಾಡಬೇಕು.

10. ಪ್ರತಿ ತಂಗುವ ಸ್ಥಳದಿಂದಲೂ ಜಾಥಾ ಪುನಃ ಹೊರಡುವಾಗ ಅಲ್ಲಿಯ ಸದಸ್ಯರನ್ನು ಜಾಥಾದ ಜೊತೆ ಹೊರಡಿಸಲು ಮುಂಚಿತವಾಗಿಯೇ ಏರ್ಪಾಡುಮಾಡಿ ಅಂತಹ ಸದಸ್ಯರ ಪಟ್ಟಿಯನ್ನು ಕೇಂದ್ರ ಕಛೇರಿಗೆ ಕಳುಹಿಸಬೇಕು.

11. ಪ್ರತಿ ತಂಗುವ ಸ್ಥಳದಲ್ಲಿ ಹಾಗೂ ಸೂಕ್ತ ಕಂಡ ಇತರ ಪ್ರದೇಶಗಳಲ್ಲಿ ಜಾಥಾದ ಉದ್ದೇಶದ ಬಗ್ಗೆ ಮಾಹಿತಿ ನೀಡಲು ಸಾರ್ವಜನಿಕ ಸಭೆಗಳನ್ನು ಇಟ್ಟುಕೊಳ್ಳಬೇಕು.

ರಾಜ್ಯ ಹೋರಾಟ ಸಮಿತಿ ಮತ್ತು ಜಿಲ್ಲಾ ಸ್ವಾಗತ ಸಮಿತಿಯ ಸಂಚಾಲಕರ ಗಮನಕ್ಕೆ :

1. ಜಾಥಾದ ಖರ್ಚಿಗಾಗಿ ಧನ ಸಂಗ್ರಹಿಸಲು ಕೇಂದ್ರ ಕಛೇರಿಯು ಅಧಿಕೃತ ದಾಖಲೆಗಳೊಡನೆ ತಮಗೆ ರಸೀದಿ ಪುಸ್ತಕವನ್ನು ಕಳುಹಿಸುವುದು. ಸಂಗ್ರಹವಾದ ಹಣದಲ್ಲಿ ಶೇ. 25 ಭಾಗವನ್ನು ಕೇಂದ್ರ ಕಛೇರಿಗೆ ಕಳುಹಿಸತಕ್ಕದ್ದು. ಉಳಿದ ಹಣವನ್ನು ಜಾಥಾ ಏರ್ಪಾಟಿಗೆ ಖರ್ಚುಮಾಡಬೇಕು. ಆಯಾಯ ಸ್ವಾಗತ ಸಮಿತಿಗಳು ತಾವು ವೆಚ್ಚ ಮಾಡುವ ಮೊತ್ತಕ್ಕೆ ಕ್ರಮವಾದ ಲೆಕ್ಕವನ್ನು ಇಟ್ಟು ಅದರ ಪ್ರತಿಗಳನ್ನು ಕೇಂದ್ರ ಕಛೇರಿಗೆ ಕಳುಹಿಸಲೇಬೇಕು. ಈ ಮಹಾನ್ ಜಾಥಾದ ಬ್ಯಾಡ್ಜ್‌ನ್ನು ಕೇಂದ್ರ ಕಛೇರಿಯು ಕಳುಹಿಸುವುದು. ಇದರ ಬೆಲೆ ಕೇವಲ ಒಂದು ರೂಪಾಯಿ. ಬ್ಯಾಡ್ಜ್ ಮಾರಿ ಬಂದ ಹಣದಲ್ಲಿ ಶೇ. 50 ಭಾಗವನ್ನು ಕೇಂದ್ರ ಕಛೇರಿಗೆ ಕಳುಹಿಸಬೇಕು.

ಹಣದ ಜಮಾ ಮತ್ತು ಖರ್ಚಿನ ಬಗ್ಗೆ ಅಧಿಕೃತ ಲೆಕ್ಕಪತ್ರಗಳಿರಬೇಕು.

2. ಭಿತ್ತಿಪತ್ರಗಳು, ಬ್ಯಾನರ್, ಕರಪತ್ರಗಳು, ಬೇಡಿಕೆಗಳ ಬಗ್ಗೆ ವಿವರವಾದ ಸಣ್ಣ ಹೊತ್ತಿಗೆಗಳು, ಘೋಷಣೆಗಳ ಪ್ರತಿಗಳು ಹಾಗೂ ಇತರ ಪ್ರಚಾರ ಸಾಮಗ್ರಿಯಗಳನ್ನು ಕೇಂದ್ರ ಕಛೇರಿಯು ಕಳುಹಿಸುವುದು.

ಬಾಕಿ ಎಲ್ಲಾ ಏರ್ಪಾಟುಗಳ ಜವಾಬ್ದಾರಿ ನಿಮ್ಮದು.

ಶಿವಮೊಗ್ಗ ಜಾಥಾ 1-2-81 ರಂದು ತುಮಕೂರನ್ನು, ಮಂಗಳೂರು ಹಾಗೂ ಹಾಸನದ ಜಾಥಾ 3-2-1981ರಂದು ನೆಲಮಂಗಲವನ್ನು, ಕೊಡಗು, ಮೈಸೂರು, ಮಂಡ್ಯ, ಜಾಥಾ 5-2-1981 ರಂದು ಬೆಂಗಳೂರನ್ನು ಹಾಗೂ ಇತರ ಸಣ್ಣ ಜಾಥಾಗಳು ಹತ್ತಿರದ ಸಣ್ಣ ಜಾಥಾಗಳನ್ನು ಸೇರತಕ್ಕದ್ದು.

ಕರ್ನಾಟಕದ ಮೂಲೆ ಮೂಲೆಯಿಂದ ಬರುವ ಜನ ಹಾಗೂ ಎಲ್ಲಾ ಮುಖ್ಯ ಜಾಥಾಗಳೂ 5-2-81 ರಂದು ಬೆಳಿಗ್ಗೆ 11 ಘಂಟೆಗೆ ಬೆಂಗಳೂರಿನ ಸುಭಾಷ್‌ನಗರದ ಕಾಂಗ್ರೆಸ್ (ಯು) ಕಛೇರಿ ಆವರಣದೊಳಗೆ ಸೇರಿ ಅಲ್ಲಿಂದ ವಿಧಾನಸೌಧದತ್ತ ಚಲಿಸಬೇಕು ಎಂದು ರೈತಕಾರ್ಮಿಕ ಹೋರಾಟ ಸಮಿತಿಯ ಪರವಾಗಿ ಕಾರ್ಯದರ್ಶಿ ಮಂಡಳಿಯು ವಿನಂತಿಸಿಕೊಂಡಿದೆ.

○

ಸಂಪಾದಕೀಯ

(1ನೇ ಪುಟದಿಂದ)

ರೈತರೂ, ಹೋರಾಟ ಇಡೀ ರಾಜ್ಯವನ್ನೇ ಅಲ್ಲಾಡಿಸಿತು. 23 ಜನರ ಬಲಿತೆಗೆದುಕೊಂಡ ಕೀರ್ತಿ ಈ ಸರ್ಕಾರಕ್ಕೆ ಸಲ್ಲಬೇಕಾಗಿದೆ. ರಾಜ್ಯದ ರೈತರೂ, ಕೃಷಿಕೆಲಸಗಾರರೂ ಈಗ ಎಚ್ಚತ್ತಿದ್ದಾರೆ. ತಮ್ಮ ನ್ಯಾಯವಾದ ಬೇಡಿಕೆಗಳಿಗೆ ಯಾವ ತ್ಯಾಗಕ್ಕೂ ತಯಾರಿದ್ದೇವೆಂದು ತೋರಿಸಿದ್ದಾರೆ. ಕೋಲಾರದಲ್ಲಿ 10,000ಕ್ಕಿಂತಲೂ ಹೆಚ್ಚು ರೈತರು ಸತ್ಯಾಗ್ರಹದಲ್ಲಿ ಭಾಗವಹಿಸಿದ್ದು ಗಮನಾರ್ಹವಾಗಿದೆ. ರಾಜ್ಯಾದ್ಯಂತ ಕಾರ್ಮಿಕರು ಆಗಸ್ಟ್ ತಿಂಗಳಲ್ಲಿ ಸಾರ್ವತ್ರಿಕ ಮುಷ್ಕರ ನಡೆಸಿದ್ದು ಮತ್ತು ಡಿಸೆಂಬರ್ 12ರಂದು ಬೆಂಗಳೂರಿನಲ್ಲಿ ನಡೆದ ಬೃಹತ್ ಪ್ರದರ್ಶನ, ಈಗ ನಡೆಯುತ್ತಿರುವ ಸಾರ್ವಜನಿಕ ಕ್ಷೇತ್ರದ ಕಾರ್ಮಿಕರ ಮುಷ್ಕರ ಕಾರ್ಮಿಕರಲ್ಲಿ ಬೆಳೆಯುತ್ತಿರುವ ವರ್ಗಜಾಗೃತಿಯನ್ನು ತೋರಿಸುತ್ತದೆ.

ರಾಜ್ಯದಲ್ಲಿ ವಿರೋಧ ಪಕ್ಷವೇ ಇಲ್ಲವೆನ್ನುವ ಮುಖ್ಯಮಂತ್ರಿಯವರ ಬೂಟಾಟಿಕೆಯ ಮಾತಿಗೆ ಕನ್ನಡ ಜನ ಬೇಗನೆ ಉತ್ತರಕೊಡಲು ತಯಾರಾಗುತ್ತಿದೆಂಬುದಾಗಿ ನಾವು ಧೈರ್ಯದಿಂದ ಹೇಳುತ್ತೇವೆ. ತಾ. 16ರಂದು ನರಗುಂದದಿಂದ ಹೊರಡುವ ರೈತರ ಜಾಥಾ ಮತ್ತು 2-2-81ರಂದು ಬೆಂಗಳೂರಿನಲ್ಲಿ ನಡೆಯುವ ರೈತರ ಪ್ರದರ್ಶನ ಇದನ್ನು ತೋರಿಸಿಕೊಡಲಿದೆ. ●

....ಸೌಹಾರ್ದ ಸಮಿತಿಯ ಕರೆ

(1ನೇ ಪುಟದಿಂದ)

ರುವುದನ್ನು ಉಗ್ರವಾಗಿ ಖಂಡಿಸಲಾಯಿತು.

ಎಲ್. ಐ. ಸಿ. ಯಲ್ಲಿ ಬೋನಸ್ ಕೊಡದೆ ಇರುವದನ್ನು ಖಂಡಿಸಿ, ಖೋಡೆ ಕಾರ್ಮಿಕರ ಮುಷ್ಕರ ಬೆಂಬಲಿಸಿ ಗೊತ್ತುವಳಿಗಳನ್ನು ಅಂಗೀಕರಿಸಲಾಯಿತು. ಸಮಾವೇಶವನ್ನು ಉದ್ದೇಶಿ ಸುಮಾರು 20ಪ್ರತಿನಿಧಿಗಳು ಮಾತನಾಡಿದರು. ಅದೇ ದಿನ ಸಾಯಂಕಾಲ ನಗರದ ಸಿಲ್ವರ್‌ಜ್ಯೂಬಿಲಿ ಪಾರ್ಕ್‌ನಲ್ಲಿ ಸೇರಿದ ಬೃಹತ್ ಬಹಿರಂಗ ಸಭೆಯನ್ನು ಉದ್ದೇಶಿಸಿ ಮೈಕಲ್ ಫರ್ನಾಂಡಿಸ್, ಡಿ. ರಾಜಗೋಪಾಲ್, ಎಂ. ಎಸ್. ಕೃಷ್ಣನ್ ಮತ್ತು ಕಾಂ. ಸೂರ್ಯನಾರಾಯಣ ರಾವ್‌ಮಾತನಾಡಿದರು. ಅಲ್ಲದೆ ಎ.ಐ.ಟಿ. ಯು. ಸಿ. ಯ ಪ್ರಧಾನಕಾರ್ಯದರ್ಶಿ ಕಾಂ. ಇಂದ್ರಜಿತ್ ಗುಪ್ತರೂ ಈ ಸಭೆಗೆ ಆಗಮಿಸಿ ಮುಷ್ಕರ ಬೆಂಬಲಿಸಿ ಮಾತನಾಡಿದರು.

●

ರೈತ-ಕಾರ್ಮಿಕ ಹೋರಾಟ ಸಮಿತಿ ಸಭೆ

ರೈತ ಕಾರ್ಮಿಕರ ಹೋರಾಟ ಸಮಿತಿಯ ರಾಜ್ಯ ಕಾರ್ಯಕಾರೀ ಸಮಿತಿ ಸಭೆ ದಿ. 11-1-81ರಂದು ಬೆಂಗಳೂರು ಕೇಂದ್ರ ಕಛೇರಿಯಲ್ಲಿ ನಡೆಯಿತು. ಸಂಚಾಲಕ ಶ್ರೀ ಡಿ. ಬಿ. ಚಂದ್ರೇಗೌಡರು ಅಧ್ಯಕ್ಷತೆ ವಹಿಸಿದ್ದರು. ರಾಜ್ಯದ ಅನೇಕ ಕಡೆಗಳಿಂದ ಆಗಮಿಸಿದ ರೈತ ಕಾರ್ಮಿಕ ಧುರೀಣರು ಚರ್ಚೆಯಲ್ಲಿ ಪಾಲ್ಗೊಂಡಿದ್ದರು.

ಸಮಿತಿಯ ಕಾರ್ಯಕಲಾಪಗಳು ಹಾಗೂ ಹೋರಾಟಕ್ಕೆ ಸಂಬಂಧಿಸಿದ ಕೆಲಸಕಾರ್ಯಗಳನ್ನು ನೋಡಿಕೊಳ್ಳಲು ಸಹಾಯಕರಾಗಿ ಕೆಳಕಂಡ ಕಾರ್ಯದರ್ಶಿ ಮಂಡಳಿಯನ್ನು ಸಭೆ ರಚಿಸಿತು.

1. ಕಾಂ. ಎಂ. ಸಿ. ವೆಂಕಟರಾಮು (ಸಿ.ಪಿ.ಐ.) 2. ಕಾಂ. ವಿ. ಜೆ. ಕೆ. ನಾಯರ್ [ಸಿ.ಪಿ.ಐ.(ಎಂ)] 3. ಶ್ರೀ ಎ. ಜಿ. ಶಾಸ್ತ್ರೀಮಠ [ಕಾಂಗ್ರೆಸ್ (ಯು)] 4. ಶ್ರೀ ರಮೇಶ್ ಬಂದಗದ್ದೆ (ಇತರೆ ಪ್ರಗತಿಪರ ಸಂಘಟನೆಗಳು). ಅಲ್ಲದೇ ಶ್ರೀ ರಮೇಶ್ ಬಂದಗದ್ದೆ ಅವರಿಗೆ ಪ್ರಚಾರದ ವ್ಯವಸ್ಥೆಯನ್ನು ವಹಿಸಿಕೊಡಲಾಗಿದೆ. ಕಾರ್ಯದರ್ಶಿ ಮಂಡಳಿಯುವರಿಗೆ ಪತ್ರಿಕಾ ಪ್ರಕಟಣೆ ನೀಡುವ ಮತ್ತು ಪತ್ರಿಕಾಗೋಷ್ಠಿಯನ್ನು ನಡೆಸುವ ಅಧಿಕಾರವನ್ನು ನೀಡಲಾಯಿತು.

16-1-81ರಂದು ಧಾರವಾಡ ಜಿಲ್ಲೆಯ ನರಗುಂದದಿಂದ ರೈತ-ಕಾರ್ಮಿಕರ "ವಿಧಾನಸೌಧ ಚಲೋ" ಮಹಾಯಾತ್ರೆ ಆರಂಭವಾಗಿ (ಈ ವರದಿ ಪ್ರಕಟವಾಗುವ ಸಮಯಕ್ಕೆ ಜಾಥಾ ಪ್ರಾರಂಭವಾಗಿದೆ) ಕಳೆದ ಜುಲೈ ತಿಂಗಳಲ್ಲಿ ನಡೆದ ರೈತ ಚಳುವಳಿಯಲ್ಲಿ ಮಡಿದ ಹುತಾತ್ಮರ ಸ್ಮರಣೆಗಾಗಿ ಜ್ಯೋತಿಯನ್ನು ತರಲಾಗುವದು.

ಜಾಥಾವನ್ನು 16ರಂದು ಬೆಳಿಗ್ಗೆ 9 ಘಂಟೆಗೆ ನರಗುಂದದಲ್ಲಿ ಶ್ರೀ ದೇವರಾಜ ಅರಸರು ಉದ್ಘಾಟಿಸುವರು. ಸಂಚಾಲಕರಾದ ಶ್ರೀ ಚಂದ್ರೇಗೌಡ, ಕಾಂ. ಬಿ. ವಿ. ಕಕ್ಕಿಲ್ಲಾಯ, ಎಂ. ಕೆ. ಭಟ್, ಶ್ರೀ ನಂಜೇಶಗೌಡ ಹಾಗೂ ಇತರ ಪ್ರಗತಿಪರ ಸಂಘಟನೆಗಳ ಮುಖಂಡರು ಮತ್ತು ಮಲಪ್ರಭ ರೈತ ಸಮಸ್ಯೆಯ ಸಮಿತಿಯ ಮುಖಂಡರು ಸಮಾರಂಭದಲ್ಲಿ ಮಾತನಾಡುವರು. ದಿನಾಂಕ 18ರಂದು ಬೆಳಿಗ್ಗೆ ಹುಬ್ಬಳ್ಳಿಯಿಂದ ಹೊರಡುವ ಜಾಥಾದಲ್ಲಿ ಲೋಕಸಭಾ ಸದಸ್ಯ ಜಾರ್ಜ್ ಫರ್ನಾಂಡೀಸರು ಭಾಗವಹಿಸುವರು.

ಶ್ರೀ ಚಂದ್ರೇಗೌಡ, ಕಾಂ. ವಿ. ಜೆ. ಕೆ. ನಾಯರ್, ಕಾಂ. ಎಂ. ಸಿ. ವೆಂಕಟರಾಮು ಜಾಥಾದ ಏರ್ಪಾಡಿಗಾಗಿ ಈಗಾಗಲೇ ಧಾರವಾಡ, ತುಮಕೂರು, ಕೋಲಾರ ಜಿಲ್ಲೆಗಳಲ್ಲಿ ಪ್ರವಾಸಮಾಡಿ ಸ್ವಾಗತ ಸಮಿತಿಗಳನ್ನು ರಚಿಸಿದ್ದಾರೆ. ಶ್ರೀ ಚಂದ್ರೇಗೌಡರು ಚಿಕ್ಕಮಗಳೂರು, ಶಿವಮೊಗ್ಗ, ಉತ್ತರ, ದಕ್ಷಿಣ ಕನ್ನಡ ಜಿಲ್ಲೆಗಳಲ್ಲಿ ಪ್ರವಾಸ ಮಾಡಲಿದ್ದಾರೆ. ಜಾಥಾ ವ್ಯವಸ್ಥಿತವಾಗಿ ನಡೆಸಲು ಸಂಬಂಧಪಟ್ಟ ಜಿಲ್ಲೆ ಹಾಗೂ ತಂಗುವ ಸ್ಥಳಗಳಲ್ಲಿ ಸ್ವಾಗತ ಸಮಿತಿಗಳನ್ನು ರಚಿಸಲಾಗುತ್ತಿದೆ. ಜಾಥಾದ ಸದಸ್ಯರಿಗೆ ಊಟ, ವಸತಿ, ವೈದ್ಯಕೀಯ ವ್ಯವಸ್ಥೆ ಮಾಡಲಾಗುವುದು.

ಜಾಥಾ ಉದ್ದಿಶ್ಯವನ್ನು ವಿವರಿಸುವ ಕ್ರಾಂತಿಗೀತೆಗಳು, ಘೋಷಣೆಗಳು, ಬೀದಿನಾಟಕಗಳು ಹಾಗೂ ಇತರ ಕಾರ್ಯಕ್ರಮಗಳನ್ನೊಳಗೊಂಡ ಸಾಂಸ್ಕೃತಿಕ ತಂಡಗಳು ಜಾಥಾದ ಜೊತೆಗಿರುತ್ತವೆ. ಬೆಲೆಏರಿಕೆಯಿಂದ ತತ್ತರಿಸುತ್ತಿರುವ ಕಾರ್ಮಿಕ ಹಾಗೂ ಜನಸಾಮಾನ್ಯರ ಮತ್ತು ಗ್ರಾಮೀಣ ಬಡವರು, ಮಹಿಳೆಯರ, ಹಳ್ಳಿಯ ರೈತರ, ಭವಿಷ್ಯದ ಬಗ್ಗೆ ಭರವಸೆ ಇಲ್ಲದೇ ಭೀತರಾದ ವಿದ್ಯಾರ್ಥಿ ಯುವಜನರ ಕನಿಷ್ಠ ಬೇಡಿಕೆಗಳನ್ನು ಆಳುವ ಸರಕಾರದ ಮುಂದಿಡಲು ಈ ಮಹಾಯಾತ್ರೆಯನ್ನು ಸುಘಟಿಸಲಾಗಿದೆ. ಫೆ. 5ರಂದು ಬೆಂಗಳೂರಿನಲ್ಲಿ ಈ ಮಹಾನ್ ಜಾಥಾ ವಿಧಾನಸೌಧಕ್ಕೆ ತರಳಿ ತನ್ನ ಅಹವಾಲನ್ನು ಸರ್ಕಾರಕ್ಕೆ ಸಲ್ಲಿಸಲಿದೆ.

ಈ ಮಹಾನ್ ಜಾಥಾದಲ್ಲಿ ರೈತರು, ಕೃಷಿಕಾರ್ಮಿಕರು, ಗೇಣಿದಾರರು, ಗ್ರಾಮೀಣ ಬಡವರು, ಮಹಿಳೆಯರು, ವಿದ್ಯಾರ್ಥಿ ಯುವಜನರು ಹಾಗೂ ಬುದ್ಧಿಜೀವಿಗಳು ಅಪಾರ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ಹೋರಾಟಸಮಿತಿ ವಿನಂತಿಸಿಕೊಂಡಿದೆ.

●

ಚಂದಾ ವಿವರ

ವಾರ್ಷಿಕ ಚಂದಾ	: 25ರೂ.
6 ತಿಂಗಳಿಗೆ	: 13ರೂ.
ಬಿಡಿ ಪ್ರತಿ	: 50 ಪೈಸೆ

Printed by P. Ramachandra Rao at Nutan Printing Publishing & Training Centre, 405, Sampige Road, Malleswaram, Bangalore-560003, and Published by him on behalf of the Communist Party of India (Marxist) Karnataka State Committee, L-56, K. V. Temple Street, Sultanpet, Bangalore-560 053.
Editorial and managerial office : L-56, K. V. Temple Street, Sultanpet, Bangalore-560 053. Phone : 24154
EDITOR : M. K. BHAT